ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 24 | ಜೂನ್ 15, 1980 | ಬೆಲೆ : 50 ಪೈಸೆ

ಮೀಸಲಾತಿ ಅಗತ್ಯ

ಸಮಾಜದಲ್ಲಿ ಅತ್ಯಂತ ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗೆ ಒಳಗಾದ ನಮ್ಮ ದೇಶದ ಹರಿಜನ-ಗಿರಿಜನರಿಗೆ ನ್ಯಾಯದೊರೆಯುವ ದೃಷ್ಟಿಯಿಂದ ನಮ್ಮ ರಾಜ್ಯಾಂಗವು ಆ ವಿಭಾಗದವರಿಗೆ ಲೋಕಸಭೆಯಲ್ಲೂ ರಾಜ್ಯಗಳ ಶಾಸನ ಸಭೆಗಳಲ್ಲೂ, ಮತ್ತು ಕೇಂದ್ರ ಮತ್ತು ರಾಜ್ಯಸರಕಾರಗಳ ನೌಕರಿಯಲ್ಲೂ ಒಂದು ಭಾಗವನ್ನು ಮೀಸಲಿಟ್ಟಿದೆ. ಚುನಾವಣೆಗಳಲ್ಲಿ ಇದನ್ನು ಇನ್ನೂ ಹತ್ತು ವರ್ಷಗಳವರೆಗೆ ಮುಂದುವರಿಸಬೇಕೆಂದು ಈಗಾಗಲೇ ನಿರ್ಧಾರ ಕೈಗೊಂಡಾಗಿದೆ. ಸರಕಾರದ ನೌಕರಿಯಲ್ಲೂ ಮೀಸಲಾತಿಕ್ರಮ ಅನುಸರಿಸಲಾಗುತ್ತಿದೆ.

ಇದರ ಬಗ್ಗೆ ದೇಶಾದ್ಯಂತ ತೀವ್ರ ಚರ್ಚೆ ನಡೆಯುತ್ತಿದೆ. ಕೆಲವರು ಇದರ ಔಚಿತ್ಯವನ್ನು ಪ್ರಶ್ನಿಸಿದ್ದಾರೆ. ಇನ್ನು ಕೆಲವರು ಈ ಕ್ರಮ ನಿರೀಕ್ಷಿಸಿದ ಫಲ ನೀಡಿಲ್ಲವೆಂದೂ, ಇದರಿಂದ ಹರಿಜನ-ಗಿರಿಜನರಲ್ಲೇ ಪಟ್ಟಭದ್ರ ಹಿತಾಸಕ್ತಿ ವಿಭಾಗವೊಂದು ಸೃಷ್ಟಿಯಾಗಿ ಅವರೇ ಇತರ ದಲಿತರನ್ನು ಶೋಷಣೆಮಾಡಲು ಅವಕಾಶ ನೀಡಿದೆಂದೂ ಆರೋಪಿಸುತ್ತಾರೆ.

ಸಂಪಾದಕೀಯ

ಇತರರು ಮೀಸಲಾತಿಯನ್ನು ಮುಂದುವರಿಸಲೇಬೇಕೆಂದು ಒತ್ತಾಯಪಡಿಸುತ್ತಿದ್ದಾರೆ.

ಉದ್ಯೋಗದಲ್ಲಿ ಮೀಸಲಾತಿ ಮುಂದರಿಯಬೇಕೆಂದು ಒಪ್ಪುವವರು ಅದನ್ನು ಉದ್ಯೋಗಕ್ಕೆ ಸೇರುವ ಮಟ್ಟಕ್ಕೇ ಸೀಮಿತಗೊಳಿಸಬೇಕೆಂದು ಹೇಳುವವರು ಹೆಚ್ಚು. ಎಲ್ಲ ಹುದ್ದೆಗಳಲ್ಲೂ ಮೀಸಲು ಕ್ರಮ ಜಾರಿಗೆ ಬಂದರೆ ಇತರ ಹಿರಿಯ ಉದ್ಯೋಗಿಗಳಿಗೆ ಅನ್ಯಾಯವಾಗುವುದೆಂದೂ, ಅವರಿಗೆ ಕೆಲಸದಲ್ಲಿ ಆಸಕ್ತಿ ಹೋಗುವುದೆಂದೂ ಹೇಳಲಾಗುತ್ತಿದೆ. ಮುಂಬಡ್ತಿಯಲ್ಲೂ ಮೀಸಲಾತಿ ಕ್ರಮವನ್ನು ಅನುಸರಿಸಬೇಕೆಂದು ಇತರರು ಒತ್ತಾಯಮಾಡುತ್ತಿದ್ದಾರೆ.

ಕರ್ನಾಟಕ ಸರ್ಕಾರ ಹೋದವರ್ಷ ಎಲ್ಲ ಹಂತಗಳಲ್ಲೂ ಶೇಕಡವಾರು ಪ್ರಾತಿನಿಧ್ಯವನ್ನು ಕೊಡಬೇಕೆಂದು ಆಜ್ಞೆ ಹೊರಡಿಸಿತ್ತು. ಇದರಿಂದ ತನಗೆ ಅನ್ಯಾಯವಾಗಿದೆಂದು ದೂರಿ ಒಬ್ಬರು ಹೈಕೋರ್ಟಿಗೆ ಅರ್ಜಿ ಹಾಕಿದಾಗ ಕೋರ್ಟು ಅವರ ವಾದವನ್ನು ಒಪ್ಪಿಕೊಂಡು ಹರಿಜನರೊಬ್ಬರಿಗೆ ಕೊಟ್ಟ ಮುಂಬಡ್ತಿ ಆಜ್ಞೆಯನ್ನು ತಡೆಹಿಡಿದಿದೆ. ಕೂಡಲೇ ಕರ್ನಾ

(ಕಡೇ ಪುಟ ನೋಡಿ)

ವಿಧಾನ ಪರಿಷತ್ತಿನಲ್ಲಿ ಗಡೀಪಾರು ಕ್ರಮದ ಖಂಡನೆ

ರಾಜ್ಯ ಸರಕಾರವು ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್‌ನ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಅವರೂ ಸೇರಿದಂತೆ ಎಂಟು ಮಂದಿ ಸಂಘದ ಸದಸ್ಯರನ್ನು ಗಡೀಪಾರು ಮಾಡುವ ಕ್ರಮವಹಿಸಿರುವುದನ್ನು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ಸದಸ್ಯರುಗಳು ತೀವ್ರವಾಗಿ ಖಂಡಿಸಿದರು. ಈ ಕಾರ್ಮಿಕ ವಿರೋಧಿ ಕ್ರಮವನ್ನು ಕೈಬಿಡಲು ಇವರು ಒತ್ತಾಯಿಸಿದರು.

ಗಡೀಪಾರು ಮಾಡುವ ಈ ಕ್ರಮವು ಹಿಂದಿನ ಸಾಮ್ರಾಜ್ಯಶಾಹಿ ಆಡಳಿತದ ಮಾದರಿಯಲ್ಲಿದೆ ಎಂದು ಟೀಕಿಸಿದ ವಿರೋಧ ಪಕ್ಷದ ಸದಸ್ಯರುಗಳು ಕಾನೂನು ರೀತ್ಯಾ ಆಯ್ಕೆಯಾಗಿರುವ ಕಾರ್ಮಿಕ ಸಂಘಟನೆಯ ಮುಖಂಡರನ್ನು ಗಡೀಪಾರು ಮಾಡುವ ಕ್ರಮ ವಹಿಸಿರುವುದರ ಔಚಿತ್ಯವೇನೆಂದು ಪ್ರಶ್ನಿಸಿದರು.

ಕಾನೂನು ರೀತ್ಯಾ ಸಂಘಟಿಸಲ್ಪಟ್ಟು ಮನ್ನಣೆ ಪಡೆದಿರುವ ಸಂಘಟನೆಯನ್ನು ಅಸ್ತಿತ್ವವೇ ಇಲ್ಲದಿರುವ ಕಾನೂನು ಬಾಹಿರವಾದ ಒಂದು ಗುಂಪಿನೊಡನೆ ಸಮಾನವಾಗಿ ನೋಡುವ ಸರಕಾರದ ಕ್ರಮವು ಸರಕಾರದ ನಿಷ್ಪಕ್ಷಪಾತ ಧೋರಣೆಯ ಬಗ್ಗೆ ಸಂಶಯ ಮೂಡಿಸಿದೆ ಎಂದು ಶ್ರೀ ಚನ್ನಬಸವಯ್ಯ ಹೇಳಿದರು. ಮಾಲಕ ಮತ್ತು ಕಾರ್ಮಿಕ ಸಂಘಟನೆಗಳೊಳಗೆ ಭಿನ್ನಾಭಿಪ್ರಾಯ ಸ್ವಾಭಾವಿಕ ಮತ್ತು ಈ ಕಾರಣಗಳಿಗಾಗಿ ಕಾರ್ಮಿಕರ ಒಬ್ಬ ಮುಖಂಡನನ್ನು ಗಡೀಪಾರು ಮಾಡುವ ಕೃತ್ಯ ಖಂಡನೀಯ ಎಂದರು. ಸರಕಾರವು ಈ ಬಗ್ಗೆ ನೀಡಿದ ವಿವರಣೆಯು ಸ್ಪಷ್ಟವಾಗಿಲ್ಲವೆಂದೂ, ಸಾಕಷ್ಟು ಮಾಹಿತಿಗಳೇ ಇಲ್ಲವೆಂದೂ ಶ್ರೀಯುತರು ಟೀಕೆ ಮಾಡಿದರು. ಔದ್ಯಮಿಕ ಕ್ಷೇತ್ರದಲ್ಲಿ ಹಿಂಸೆಯನ್ನು ಪ್ರಚೋದಿಸುತ್ತಲಿರುವ ಐ.ಎನ್.ಟಿ.ಯು.ಸಿ. (ಕಾಂಗ್ರೆ) ಮುಖಂಡರುಗಳ ಮೇಲೆ ಗಡೀಪಾರು ಕ್ರಮ ವಹಿಸಿದ್ದರೆ ಅದು ಸೂಕ್ತವಿತ್ತೆಂದೂ ಚನ್ನಬಸವಯ್ಯ ಹೇಳಿದರು.

ಸರಕಾರವು ಎಲ್ಲಾ ಮಾಹಿತಿಗಳನ್ನು ಮತ್ತು ಸಂಬಂಧಿಸಿದ ವಿಷಯಗಳನ್ನು

(ಕಡೇ ಪುಟ ನೋಡಿ)

ಹಕ್ಕುಗಳ ರಕ್ಷಣೆಗಾಗಿ ಬೆಂಗಳೂರಲ್ಲಿ ಕಾರ್ಮಿಕರ ಬೃಹತ್ ರ್‍ಯಾಲಿ

ಇತ್ತೀಚೆಗೆ ಕರ್ನಾಟಕ ರಾಜ್ಯ ಸರಕಾರವು ಜಾರಿಗೆ ತರಲು ಪ್ರಯತ್ನಿಸುತ್ತಿರುವ "ಅಗತ್ಯ ಸೇವಾ ಮಸೂದೆ"ಯನ್ನು ಹಿಂತೆಗೆದುಕೊಳ್ಳುವಂತೆ, ಸಿ.ಐ.ಟಿ.ಯು. ಮುಖಂಡರಾದ ಕಾಂ. ಸೂರ್ಯನಾರಾಯಣ ರಾವ್ ಹಾಗೂ ಮೈಕೊ ಮತ್ತು ಐ.ಟಿ.ಸಿ. ಕಾರ್ಮಿಕ ಸಂಘಗಳ ಮುಖಂಡರನ್ನು ಬೆಂಗಳೂರು ನಗರದಿಂದ ಗಡೀಪಾರು ಮಾಡಲು ಪೋಲೀಸರು ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಕೈಬಿಡುವಂತೆ ಒತ್ತಾಯಿಸಿ ಜೂನ್ 9ರಂದು ಸಹಸ್ರಾರು ಕಾರ್ಮಿಕರು ನಗರದ ಬೀದಿಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿದರು. ಮಧ್ಯಾಹ್ನದ ಮೇಲೆ ಒಂದು ಘಂಟೆಗೆ ಹೊರಟ ಈ ಮೆರವಣಿಗೆಯ ನೇತೃತ್ವವನ್ನು ಕಾಂ. ಸೂರ್ಯನಾರಾಯಣ ರಾವ್, ಕಾಂ, ಎಂ. ಎಸ್ ಕೃಷ್ಣನ್ ಮೊದಲಾದವರು ವಹಿಸಿದ್ದರು. ಮೆರವಣಿಗೆಯು ಕಬ್ಬನ್‌ಪಾರ್ಕ್ ತಲುಪಿದ ನಂತರ ಕಾರ್ಮಿಕ ಮುಖಂಡರುಗಳ ನಿಯೋಗವೊಂದು ಮುಖ್ಯಮಂತ್ರಿಯವರನ್ನು ಭೆಟ್ಟಿಯಾಗಿ ಮನವಿಯನ್ನು ಅರ್ಪಿಸಲಾಯಿತು. ಒಂದು ವಾರದೊಳಗೆ ಬೇಡಿಕೆಗಳ ಬಗ್ಗೆ ಪರಿಶೀಲಿಸುವುದಾಗಿ ಮುಖ್ಯಮಂತ್ರಿಯವರು ಭರವಸೆ ಇತ್ತಿರುವರು.

ಜೂನ್ ಒಂದರಂದು ನಗರದ ದೇವಾಂಗಸಂಘ ಹಾಲಿನಲ್ಲಿ ನಡೆದ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಮಾವೇಶದಲ್ಲಿ ರಚಿತವಾದ 'ಟ್ರೇಡ್ ಯೂನಿಯನ್ ಹಕ್ಕುಗಳ ಸಂರಕ್ಷಣಾ ಕ್ರಿಯಾಸಮಿತಿ'ಯ ನೇತೃತ್ವದಲ್ಲಿ ಈ ಕಾರ್ಯಕ್ರಮ ಜರುಗಿತು. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಚ್.ಎಂ.ಎಸ್., ಬಿ.ಎಂ.ಎಸ್., ಐ.ಎನ್.ಟಿ.ಯು.ಸಿ. (ಕಾಂಗ್ರೆಸ್ ನೇತೃತ್ವದ್ದು) ಮತ್ತು ಇತರ ಕಾರ್ಮಿಕ ಸಂಘಟನೆಗಳು ಇದರಲ್ಲಿ ಪಾಲ್ಗೊಂಡಿದ್ದವು. ವಿಧಾನಸೌಧದ ಸುತ್ತ 1 ಕಿ.ಮೀ. ದೂರದಲ್ಲಿ ನಿಷೇದಾಜ್ಞೆ ಜಾರಿ ಇದ್ದರೂ, ಕಾರ್ಮಿಕರ ಶಕ್ತಿಯ ಮುಂದೆ ಇದರಿಂದ ಏನೂ ಪರಿಣಾಮವಾಗದಾಯಿತು. ಬೇರೆಬೇರೆಡೆಗಳಿಂದ ಬಂದ ಕಾರ್ಮಿಕರ ಮೆರವಣಿಗೆಗಳು ಕಬ್ಬನ್ ಪಾರ್ಕನ್ನು ಸೇರಿದವು. ಹತ್ತು ಸಹಸ್ರಕ್ಕೂ ಮೀರಿದ ದುಡಿಯುವ ಜನಸ್ತೋಮದ ಬಹಿರಂಗ ಸಭೆಯು ಸಂಜೆ 5 ಗಂಟೆಗೆ ಕಾಂ. ರಾಜಣ್ಣ ಮತ್ತು ಬಳಗದವರಿಂದ ಕ್ರಾಂತಿಗೀತೆಗಳ ಮೂಲಕ ಪ್ರಾರಂಭವಾಯಿತು.

ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನವನ್ನು ಎಚ್.ಎಂ.ಎಸ್.ನ ವೆಂಕಟ್ರಾಮ್ ವಹಿಸಿದ್ದರು. ಬಹಿರಂಗ ಸಭೆಯಲ್ಲಿ ಸಿ.ಐ.ಟಿ.ಯು ವಿನ ವಿ. ಜೆ. ಕೆ. ನಾಯರ್ ಮತ್ತು ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿ.ನ ಎಂ. ಎಸ್. ಕೃಷ್ಣನ್ ಮತ್ತು ಬಾಬೂ ಮ್ಯಾಥ್ಯೂ, ಎಚ್. ಎಂ. ಎಸ್.ನ ವೆಂಕಟೇಶ್, ಬಿ. ಎಂ. ಎಸ್.ನ ಶೇಷಾದ್ರಿ, ಶಾಸಕರುಗಳಾದ ಬಿ ವಿ. ಕಕ್ಕಿಲ್ಲಾಯ ಮತ್ತು ಮೈಕೇಲ್ ಫರ್ನಾಂಡಿಸ್, ಕಾರ್ಮಿಕ ಮುಖಂಡ ಡಿ. ರಾಜಗೋಪಾಲ್ ಮತ್ತು ಕಾಂಗ್ರೆಸ್ (ಯು) ಅಧ್ಯಕ್ಷ ಮತ್ತು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಮೊದಲಾದವರು ಭಾಷಣ ಮಾಡಿದರು.

ಪ್ರಾರಂಭದಲ್ಲಿ ಮಾತನಾಡಿದ ಕಾಂ. ಮ್ಯಾಥ್ಯೂ ಮತ್ತು ಬಿ ವಿ. ಕಕ್ಕಿಲ್ಲಾಯರವರು 'ಅಗತ್ಯ ಸೇವಾ ಮಸೂದೆ'ಯನ್ನು ತರಬೇಕೆಂದಿರುವ ಸರ್ಕಾರದ ಕರಾಳ ಶಾಸನದ ಬಗ್ಗೆ ವಿವರಿಸಿದರು. ನಂತರ ಮಾತನಾಡಿದ ಲೋಕದಳದ ವಿಧಾನಸಭಾ ಸದಸ್ಯ ಎಂ. ಬಿ. ಫರ್ನಾಂಡಿಸ್‌ರವರು ವಿರೋಧ ಪಕ್ಷಗಳ ಒತ್ತಾಯದಿಂದ ಈ ಮಸೂದೆಯನ್ನು 'ಸೆಲೆಕ್ಟ್ ಕಮಿಟಿ'ಗೆ ಒಪ್ಪಿಸಿದ್ದು ಈ ಕರಾಳ ಮಸೂದೆಯನ್ನು ರದ್ದುಮಾಡುವ ಅಧಿಕಾರವಿಲ್ಲದ ಸೆಲೆಕ್ಟ್ ಕಮಿಟಿಗೆ ರಾಜೀನಾಮೆ ನೀಡುವುದಾಗಿ ಘೋಷಿಸಿದರು. ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ನುಂಗುವ ಈ ಮಸೂದೆಯನ್ನು ನಿರ್ನಾಮ ಮಾಡುವ ಸಂಕೇತವಾಗಿ ಮಸೂದೆಯ ಪ್ರತಿಯೊಂದನ್ನು ಚಿಂದಿಚಿಂದಿಯಾಗಿ ಹರಿದು ಆ ಚೂರುಗಳಿಗೆ ಕಾರ್ಮಿಕ ಸಂಗಾತಿಯೊಬ್ಬರಿಂದ ಬೆಂಕಿ ಹೊತ್ತಿಸಿ ಸುಟ್ಟು ತಮ್ಮ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು.

(ಕಡೇ ಪುಟ ನೋಡಿ)

ಟ್ರೇಡ್‌ಯೂನಿಯನ್ ಹಕ್ಕುಗಳ ರಕ್ಷಣೆಗೆ ಹೋರಾಡಲು ಕರೆ

[ರಾಜ್ಯ ಸರಕಾರವು ಮುಷ್ಕರ ನಿಷೇಧಿಸುವುದರ ವಿರುದ್ಧ ಹೋರಾಡುವುದರ ಬಗ್ಗೆ ಚರ್ಚಿಸಲು ತಾ|| 1-6-80 ರಂದು ಬೆಂಗಳೂರಲ್ಲಿ ಸೇರಿದ್ದ ಕೇಂದ್ರ ಕಾರ್ಮಿಕ ಸಂಘಟನೆ ಮತ್ತು ಇತರ ಕಾರ್ಮಿಕ ಸಂಘಟನೆಗಳ ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯದ ವಿವರವನ್ನು ಇಲ್ಲಿ ಕೊಡಲಾಗಿದೆ.]

ಟ್ರೇಡ್‌ಯೂನಿಯನ್ ಹಕ್ಕುಗಳಿಗೆ ತೀವ್ರ ಧಕ್ಕೆ ಒದಗುತ್ತಿರುವ ಈ ಸಂದರ್ಭದಲ್ಲಿ ಹಕ್ಕುಗಳ ರಕ್ಷಣೆಗೆ ಟ್ರೇಡ್ ಯೂನಿಯನ್ ಪ್ರತಿನಿಧಿಗಳ ಸಮಾವೇಶ ಬೆಂಗಳೂರಿನಲ್ಲಿ 1-6-80ರಂದು ಸೇರಿತ್ತು. ತುರ್ತುಪರಿಸ್ಥಿತಿಯಲ್ಲಿ ಟ್ರೇಡ್‌ಯೂನಿಯನ್ ಹಕ್ಕುಗಳಿಗೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ತೀವ್ರ ಧಕ್ಕೆ ಒದಗಿದ್ದು, ಈಗ ಮತ್ತಷ್ಟು ಹಾನಿ ಆಗುತ್ತಿರುವುದರ ಅರಿವು ಕಾರ್ಮಿಕ ವರ್ಗಕ್ಕೆ ಇದೆ.

ತಾವು ಹಿಂದೆ ಗಳಿಸಿದ ವಿಜಯಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ಕಾರ್ಮಿಕ ವರ್ಗದ ಸಂಘಟಿತ ವಿಭಾಗವು ಹೋರಾಟಗಳನ್ನು ನಡೆಸುತ್ತಿದೆ. ಅಸಂಘಟಿತ ಕಾರ್ಮಿಕರು ಈಗ ಸಂಘಟಿತರಾಗುತ್ತಿದ್ದು, ಅವರ ಸಂಘಟನೆಗಳನ್ನು ಉಳಿಸಿಕೊಳ್ಳಲು ಈಗ ಮುಖ್ಯವಾಗಿ ಹೋರಾಡುತ್ತಿದ್ದಾರೆ. ಅವರ ಜೀವನಮಟ್ಟ ಸುಧಾರಣೆಗಾಗಿ ನಡೆಸುವ ಹೋರಾಟಗಳು ಇನ್ನೂ ಫಲ ನೀಡಬೇಕಾಗಿದೆ. ಲೇ ಆಫ್ ಮುಂತಾದ ಕ್ರಮಗಳನ್ನು ಕಾರ್ಮಿಕರು ಪ್ರತಿಭಟಿಸುತ್ತಿದ್ದಾರೆ. ಆದ್ದರಿಂದ ಆಳುವ ವರ್ಗಗಳು ತಮ್ಮನ್ನು ತಾವು ಶಿಸ್ತಿಗೆ ಒಳಪಡಿಸಿಕೊಳ್ಳುವುದರ ಬದಲು ಕಾರ್ಮಿಕ ವರ್ಗವನ್ನು "ಶಿಸ್ತಿನಲ್ಲಿಡಲು" ಪ್ರಯತ್ನಿಸುತ್ತಿದ್ದಾರೆ.

ನಮ್ಮ ದೇಶದ ಆಳುವ ವರ್ಗಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಅಭಿವೃದ್ಧಿ ಮಾರ್ಗದ ಬಿಕ್ಕಟ್ಟು ಯಾವ ಹಂತವನ್ನು ಮುಟ್ಟಿದೆಯೆಂದರೆ, ಅವರ ದಿವಾಳಿ ನೀತಿಗಳಿಂದ ಉಂಟಾದ ಸಾಮೂಹಿಕ ಹೋರಾಟಗಳ ಪ್ರವಾಹವನ್ನು ತೆಗೆದುಕೊಳ್ಳುವ ಚೈತನ್ಯ ಅದಕ್ಕಿಲ್ಲ. ನಿರುದ್ಯೋಗ, ಬೆಲೆ ಏರಿಕೆ, ವೇತನಗಳ ಅಂತರ ಮುಂತಾದ ಸಮಸ್ಯೆಗಳನ್ನು ಆಳುವವರ್ಗಗಳು ನಿವಾರಿಸಲು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯು, ಮಿಲಿಯಗಟ್ಟಲೆ ಗ್ರಾಮೀಣ ಕುಶಲಕರ್ಮಿಗಳು ಜಾಗಬಿಟ್ಟು ಉದ್ಯೋಗ ಮಾರುಕಟ್ಟೆಗೆ ಬರುವಂತೆ ಮಾಡಿದೆ. ನಮ್ಮ ದೇಶದ ಅಸಂಘಟಿತ ಕಾರ್ಮಿಕ ವಲಯಗಳಲ್ಲಿ ಇವರು, ಇತರ ನಿರುದ್ಯೋಗಿಗಳು ಮತ್ತು ಅರೆಉದ್ಯೋಗಿಗಳು ಶೋಷಣೆಗೆ ಪಕ್ಕಾಗುತ್ತಿದ್ದಾರೆ.

ಆಳುವ ವರ್ಗಗಳಿಗೆ ಅಧಿಕಲಾಭದಲ್ಲಿ ಬಿಟ್ಟರೆ ಬೇರೆ ವಿಚಾರದಲ್ಲಿ ಆಸಕ್ತಿ ಇಲ್ಲ. ಅವರಿಗೆ ಸಾಮಾಜಿಕ ಕಾಳಜಿ ಇಲ್ಲ. ಜನತೆಯ ವೇತನ ಹೆಚ್ಚುವುದಕ್ಕೆ ಆಳುವ ವರ್ಗಗಳು ಬಿಡುವುದಿಲ್ಲ. ಆದ್ದರಿಂದ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಲು ಜನತೆಗೆ ಸಾಧ್ಯವಾಗುವುದಿಲ್ಲ. ಆರ್ಥಿಕತೆಯ ಯಾವ ವಲಯದಲ್ಲಿ ಶೀಘ್ರ ಲಾಭ ಬರುವುದಿಲ್ಲವೋ ಅಂಥ ಉದ್ಯಮಗಳಲ್ಲಿ ಆಳುವವರ್ಗಗಳು ಹಣ ತೊಡಗಿಸುವುದಿಲ್ಲ. ಅಭಿವೃದ್ಧಿಯಲ್ಲಿ ಬಂಡವಾಳ ಹೂಡಿಕೆ ತೀರ ಕಡಿಮೆ ಮಟ್ಟದಲ್ಲಿರುವುದರಿಂದ, ವಿದ್ಯುತ್ ಉತ್ಪಾದನೆ ಮುಂತಾದವು ಅವನ್ನು ಬಳಸುವ ಕೈಗಾರಿಕೆಗಳಿಗಿಂತ ಕಡಿಮೆ ಪ್ರಮಾಣದ ಅಭಿವೃದ್ಧಿ ಮಟ್ಟದಲ್ಲಿವೆ. ಇದರ ಪಲಿತಾಂಶವಾಗಿ ವಿದ್ಯುತ್ ಶಕ್ತಿ, ಕಲ್ಲಿದ್ದಲು ಮತ್ತಿತರ ಶಕ್ತಿ ಮೂಲಗಳ ಉತ್ಪಾದನೆಯಲ್ಲಿ ಅಭಾವ ತಲೆದೋರಿದೆ. ಶಕ್ತಿ ಮತ್ತು ಸಾರಿಗೆ ಸಮಸ್ಯೆಗಳಿಂದ ಸ್ಥಾಪಿತ ಶಕ್ತಿಯ ಬಳಕೆಯೂ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಸ್ಥಾಪಿತ ಶಕ್ತಿಯ ಒಂದು ಭಾಗಮಾತ್ರ ಬಳಕೆಯಾಗುತ್ತಿದ್ದು, ಲೇ ಆಫ್, ವಜಾ ಮತ್ತು ಕಾರ್ಖಾನೆ ಬಂದ್‌ಗಳು ದಿನನಿತ್ಯ ಸಂಭವಿಸುತ್ತಿವೆ.

ಆಳುವ ವರ್ಗಗಳು ಈ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಿಲ್ಲ ಏಕೆಂದರೆ ಅವರಿಗೆ ಸಮಾಜದ ಬಗ್ಗೆ ಕಾಳಜಿ ಇಲ್ಲ. ಅಪಾರ ಲಾಭಗಳಿಕೆಯಲ್ಲಿ ಬಿಟ್ಟರೆ ಅವರಿಗೆ ಬೇರೆ ಆಸಕ್ತಿ ಇಲ್ಲ. ಸಮಾಜದ ಎಲ್ಲ ಸಂಕಷ್ಟಗಳಿಗೆ ಅವರು ಕಾರ್ಮಿಕವರ್ಗವನ್ನು ದೂರುತ್ತಿದ್ದಾರೆ. ಗುತ್ತೇದಾರಿ ಮತ್ತು ಕೈಚಳಕದ ಸಮೂಹ ಮಾಧ್ಯಮದ ಮೂಲಕ ಆಳುವ ವರ್ಗಗಳು ವಿಷಯಗಳನ್ನು ತಪ್ಪುದಾರಿಗೆ ತಿರುಗಿಸಿ, ಮುಷ್ಕರ, ಪ್ರತಿಭಟನೆಗಳಿಂದಲೇ ಎಲ್ಲ ಸಮಸ್ಯೆಗಳು ಉದ್ಭವಿಸುತ್ತಿವೆಯೆಂದು ಚಿತ್ರಿಸುತ್ತಿದ್ದಾರೆ. ಕಾರ್ಮಿಕವರ್ಗದ ಕೆಲವು ಭಾಗವು ಈ ಪ್ರಚಾರಕ್ಕೆ ಬಲಿಯಾಗಿ ಅವು ತಟಸ್ಥವಾಗಿ ವರ್ತಿಸುವಂತೆಮಾಡಿಕೊಳ್ಳುವುದರಲ್ಲೂ ಆಳುವವರ್ಗಗಳು ಸಫಲವಾಗಿವೆ. ಸರ್ವಾಧಿಕಾರಿ ಕ್ರಮಗಳ ಮೂಲಕ ವರ್ಗಸಂಘರ್ಷಗಳ ಪ್ರವಾಹವನ್ನು ತಡೆಯಲು ಆಳುವವರ್ಗಗಳು ಸಿದ್ಧತೆಮಾಡಿಕೊಳ್ಳುತ್ತಿವೆ.

ಕಳ್ಳನನ್ನು ಹಿಡಿಯಲು ಹಿಂಬಾಲಿಸಿದಳೆ ಅವನೇ 'ಕಳ್ಳ' ಎಂದು ಕೂಗಿಕೊಳ್ಳುವಂತೆ, ಆಳುವ ವರ್ಗಗಳು 'ಶಿಸ್ತು' ಎಂದು ಬೊಬ್ಬೆ ಹಾಕುತ್ತಿವೆ. ಆಳುವ ವರ್ಗಗಳು ತಮ್ಮ ದುಡಿಮೆ ಶಕ್ತಿಯನ್ನು ದೋಚುವುದನ್ನು ಪ್ರತಿಭಟಿಸುವ ಕಾರ್ಮಿಕವರ್ಗವನ್ನು ಶಿಸ್ತಿನಲ್ಲಿಡಲು ಆಳುವ ವರ್ಗಗಳು ಬಯಸುತ್ತಿವೆ. ಶಿಸ್ತು ಎಂದು ಬೊಬ್ಬಿರಿಯುವ ಆಳುವ ವರ್ಗಗಳು ತಮ್ಮನ್ನು ಶಿಸ್ತಿನಲ್ಲಿರಿಸಿಕೊಳ್ಳುವುದಿಲ್ಲ. ತಮ್ಮ ಲಾಭಗಳನ್ನು ಅವರು ಕಡಿಮೆ ಮಾಡಿಕೊಳ್ಳಲು ತಯಾರಿಲ್ಲ. ಅವರು ಪ್ರಜಾಸತ್ತಾತ್ಮಕ ಕ್ರಮಗಳನ್ನು ಒಪ್ಪಿಕೊಳ್ಳಲು ತಯಾರಿಲ್ಲ ಮತ್ತು ಕಾರ್ಮಿಕ ವರ್ಗಕ್ಕೆ ಕನಿಷ್ಟ ಅಸ್ತಿತ್ವಕ್ಕಿಂತ ಹೆಚ್ಚಿನದನ್ನು ನೀಡಲು ಸಿದ್ಧವಿಲ್ಲ.

ಟ್ರೇಡ್ ಯೂನಿಯನ್ ಹಕ್ಕುಗಳನ್ನು ನಾಶಪಡಿಸುವ ಶಾಸನಗಳನ್ನು ಆಳುವವರ್ಗಗಳು ತರುತ್ತಿವೆ. 1979ರ ಕರ್ನಾಟಕ ಅಗತ್ಯ ಸೇವೆಗಳ ಮಸೂದೆ ಅಂಥದರಲ್ಲಿ ಒಂದು. ಸರಕಾರ ನಿಗದಿ ಮಾಡಿದಂತೆ ನೀರುಸರಬರಾಜು, ವಿದ್ಯುಚ್ಛಕ್ತಿ, ಸಾರಿಗೆ ಮುಂತಾದ ವಲಯಗಳಲ್ಲಿ ಕಾರ್ಮಿಕರು ಕೆಲಸಕ್ಕೆ ಹಾಜರಾಗದಿರುವುದನ್ನು "ಕೆಲಸ ಮಾಡಲು ನಿರಾಕರಿಸಿ"ದ್ದಾರೆಂದು ಪರಿಗಣಿಸುತ್ತದೆ. ಕೆಲಸಮಾಡಲು ನಿರಾಕರಿಸುವ ಅಥವಾ ಅವರಿಗೆ ಬೆಂಬಲಿಸುವ ಯಾವುದೇ ವ್ಯಕ್ತಿಯನ್ನು ವಾರೆಂಟ್ ಇಲ್ಲದೆ ಯಾವ ಪೋಲೀಸ್ ಅಧಿಕಾರಿಯಾದರೂ ಬಂಧಿಸಲು ಮಸೂದೆ ಅವಕಾಶ ನೀಡುತ್ತದೆ. ಅಂಥ ವ್ಯಕ್ತಿಗಳನ್ನು ಒಂದು ವರ್ಷ ಕಾಲ ಜೈಲಿನಲ್ಲಿಡಲೂ ಅವಕಾಶವಿದೆ.

ಈ ಮಸೂದೆಯನ್ನು ಆಯ್ಕೆ ಸಮಿತಿಯ ಮುಂದೆ ಇಡಲಾಗಿದೆ. ಇದನ್ನು ಕ್ರಿಯಾರೂಪಕ್ಕೆ ತರುವುದನ್ನು ಶಾಸನಸಭೆಯ ಒಳಗೆ ಮತ್ತು ಹೊರಗೆ ತಡೆಹಿಡಿಯಬೇಕಾಗಿದೆ.

ಜೂನ್ 2ರಿಂದ 8ರವರೆಗೆ ಪ್ರತಿಭಟನಾ ಪ್ರದರ್ಶನಗಳು, ಗೇಟ್ ಮೀಟಿಂಗ್‌ಗಳನ್ನು ನಡೆಸಿ, 9ನೇ ಜೂನ್‌ನಂದು ವಿಧಾನಸೌಧದ ಶಾಸನ ಸಭೆಯ ಮುಂದೆ ಪ್ರತಿಭಟನೆ ನಡೆಸುವಂತೆ ಈ ಸಮಾವೇಶ ಬೆಂಗಳೂರಿನ ಕಾರ್ಮಿಕವರ್ಗಕ್ಕೆ ಕರೆನೀಡಿದೆ.

ಬೆಂಗಳೂರಿನ ಕಾರ್ಯಕ್ರಮಕ್ಕೆ ಅನುಗುಣವಾಗಿ ಬೇರೆ ಕಾರ್ಯಕ್ರಮಗಳನ್ನು ರೂಪಿಸಲು ಕರ್ನಾಟಕದ ಇತರ ಕೈಗಾರಿಕೆ ಮತ್ತು ಜಿಲ್ಲಾ ಕೇಂದ್ರಗಳ ಕಾರ್ಮಿಕವರ್ಗಕ್ಕೆ ಈ ಸಮಾವೇಶ ಕರೆನೀಡಿದೆ.

ಸರ್ಕಾರವು ಈ ಮಸೂದೆಯನ್ನು ಜಾರಿಮಾಡುವುದನ್ನು ತಡೆಯಲು ಮತ್ತು ಕೈಗಾರಿಕಾ ವಿವಾದಗಳಲ್ಲಿ ಪೋಲೀಸರ ಬಳಕೆಯನ್ನು ತಡೆಯಲು ಮುಂದಿನ ಕಾರ್ಯಕ್ರಮವನ್ನು ರೂಪಿಸುವ ಅಧಿಕಾರವನ್ನು ಸಮಾವೇಶವು ಚುನಾಯಿತ ಸಮಿತಿಗೆ ನೀಡುತ್ತದೆ.

ಟ್ರೇಡ್‌ಯೂನಿಯನ್ ಹಕ್ಕುಗಳು ಪ್ರಜಾಪ್ರಭುತ್ವವಾದಿ ಹಕ್ಕುಗಳ ಒಂದು ಭಾಗ, ಆ ಹಕ್ಕುಗಳಿಗೆ ಚ್ಯುತಿಬಂದರೆ ಕಾರ್ಮಿಕವರ್ಗದ ಚಳುವಳಿಗೆ ಧಕ್ಕೆ ಒದಗುತ್ತದೆ, ಆಗ ಆಳುವವರ್ಗಗಳು ಜನತೆಯ ಇತರ ವರ್ಗಗಳ ಮೇಲೆ ಒತ್ತಡ ಹೇರಿ ಇತರ ಪ್ರಜಾಪ್ರಭುತ್ವವಾದಿ ಹಕ್ಕುಗಳ ಮತ್ತು ವಾಕ್ ಸ್ವಾತಂತ್ರ್ಯವನ್ನು ಸಹಮೊಟಕುಗೊಳಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಂಡು ಕ್ರಿಯಾಶೀಲರಾಗಲು ಜನತೆಯ ಎಲ್ಲ ವರ್ಗಗಳಿಗೆ ಈ ಸಮಾವೇಶ ಕರೆನೀಡುತ್ತದೆ.

ಆದ್ದರಿಂದ ಟ್ರೇಡ್‌ಯೂನಿಯನ್ ಹಕ್ಕುಗಳ ರಕ್ಷಣೆಗಾಗಿ ಕಾರ್ಮಿಕವರ್ಗ ನಡೆಸುವ ಕ್ರಿಯೆಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸಿ ಬಲಪಡಿಸಲು ಜನತೆಯ ಎಲ್ಲ ವರ್ಗಗಳಿಗೆ ಈ ಸಮಾವೇಶ ಕರೆನೀಡುತ್ತದೆ.

ಮಹಾರಾಷ್ಟ್ರ ಮತ್ತು ಗುಜರಾತ್‌ಗಳ ಇಂಥ ಕ್ರಮಗಳನ್ನು ಸಮಾವೇಶ ಖಂಡಿಸುತ್ತದೆ.

ಈ ಮೇಲಿನ ಗೊತ್ತುವಳಿಯನ್ನು ಕಾಂ. ವಿ. ಜೆ. ಕೆ. ನಾಯರ್ ಅವರು ಮಂಡಿಸಿದರು, ಅವಿರೋಧವಾಗಿ ಇದನ್ನು ಸ್ವೀಕರಿಸಲಾಯಿತು.

೦

ಭ್ರಷ್ಟ ಅಧಿಕಾರಿಯ ಮೇಲೆ ಕ್ರಮಕ್ಕೆ ಒತ್ತಾಯ

ಬಿಜಾಪುರದ ಟಕಟಗಿ ಮತ್ತು ತಾಂಡದ ಸುಮಾರು ನೂರೈವತ್ತು ಜನರು ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಭೀಮಸಿ ಕಲಾದಗಿ ಮತ್ತು ನಗರಸಭೆಯ ಕಾಮಗಾರ ಯೂನಿಯನ್ ಕಾರ್ಯದರ್ಶಿ ಕಾಂ. ವಿ. ಎಮ್. ಸೊನ್ನದ ಇವರುಗಳ ನೇತೃತ್ವದಲ್ಲಿ ಮೆರವಣಿಗೆ ಮೂಲಕ ತಹಸೀಲ್ದಾರರ ಕಛೇರಿಗೆ ತೆರಳಿ ಮನವಿಯನ್ನು ಅರ್ಪಿಸಲಾಯಿತು, ಸಕ್ಕರೆ ಮತ್ತಿತರ ಜೀವನಾವಶ್ಯಕ ಸಾಮಗ್ರಿಗಳನ್ನು ಒದಗಿಸಲು ಮನವಿಯಲ್ಲಿ ಒತ್ತಾಯಿಸಲಾಗಿದೆ. ಮುಂದೆ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ, ಅಲ್ಲಿ ಕಾಂ. ಭೀಮಸಿ ಕಲಾದಗಿ, ಕಾಂ. ಸೊನ್ನದ, ಕಾಂ. ಬಿ. ಟಿ. ಪಾಟೀಲ ಮತ್ತು ಶಿವಾಜಿರಾಮಸಿಂಗ ಪತ್ತಾರ ಇವರುಗಳ ನಿಯೋಗವು ಜಿಲ್ಲಾಧಿಕಾರಿಯವರನ್ನು ಭೇಟಿಮಾಡಿತು. ಭ್ರಷ್ಟ ಫುಡ್ ಇನ್ಸ್‌ಪೆಕ್ಟರನನ್ನು ಕೆಲಸದಿಂದ ಅಮಾನತುಗೊಳಿಸಬೇಕು ಇಲ್ಲವೇ ವರ್ಗಾವಣೆ ಮಾಡಲು ಒತ್ತಾಯಿಸಲಾಯಿತು. ಆಗ ಅಲ್ಲೇ ಇದ್ದ ಫುಡ್ ಡೆಪ್ಯೂಟಿ ಕಮೀಷನರವರು ಸ್ವತಹಾ ಹೋಗಿ ಈ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿ ಆದೇಶ ನೀಡಿದರು.

●

ಗಡೀಪಾರು ಕ್ರಮಕ್ಕೆ ಬಿ.ಟಿ.ಆರ್. ಖಂಡನೆ

ಸೆಂಟರ್ ಆಫ್ ಟ್ರೇಡ್‌ಯೂನಿಯನ್ಸ್‌ನ ಅಧ್ಯಕ್ಷರಾದ ಬಿ. ಟಿ. ರಣದಿವೆ ಅವರು ಮೇ 13ರಂದು ಈ ಹೇಳಿಕೆಯನ್ನು ಕೊಟ್ಟಿದ್ದಾರೆ:

ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಸಮಿತಿಯ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಅವರೂ ಸೇರಿದಂತೆ ಮೈಕೋ ಕಾರ್ಖಾನೆಯ ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡುವ ಕ್ರಮವನ್ನು ಸಿ. ಐ. ಟಿ. ಯು. ಖಂಡಿಸುತ್ತದೆ.

ಸರ್ಕಾರದ ಈ ಕ್ರಮವು ಕಾರ್ಮಿಕರ ಟ್ರೇಡ್‌ಯೂನಿಯನ್ ಹಕ್ಕುಗಳಿಗೆ ಕೊಟ್ಟ ನೇರವಾದ ಪೆಟ್ಟಾಗಿದೆ. ಕರ್ನಾಟಕ ಪೋಲೀಸ್ ಕಾಯಿದೆಯ ಸಹಾಯದಿಂದ ಕಾರ್ಮಿಕರು ನ್ಯಾಯಬದ್ಧ ಬೇಡಿಕೆಗಳಿಗಾಗಿ ನಡೆಸುವ ಹೋರಾಟವನ್ನು ದಮನಮಾಡಲು ಗುತ್ತೇದಾರಿ ಸಂಸ್ಥೆಯಾದ ಮೈಕೋ ಆಡಳಿತವರ್ಗಕ್ಕೆ ಸಹಾಯಮಾಡುವ ಉದ್ದೇಶವೂ ಇದರಲ್ಲಿದೆ. ಕಾರ್ಮಿಕರು ಈಗ ಸ್ವಲ್ಪ ಕಾಲದ ಹಿಂದೆ ತಮ್ಮ ದೀರ್ಘ ಹೋರಾಟಕ್ಕೆ ಜಯಗಳಿಸಿರುವುದರಿಂದ ಈ ಕ್ರಮ ಮತ್ತಷ್ಟು ಖಂಡನಾರ್ಹವಾಗಿದೆ

ಟ್ರೇಡ್‌ಯೂನಿಯನ್ ಮುಖಂಡರ ವಿರುದ್ಧ ಮೈಕೋ ಆಡಳಿತ ವರ್ಗವು ಗೂಂಡಾಗಳನ್ನು ಬಳಸುತ್ತಿದೆ. ಆತ್ಮರಕ್ಷಣೆಯ ಸಲುವಾಗಿ ಮಾಡುವ ಪ್ರಯತ್ನಗಳನ್ನು ಪೋಲೀಸರು "ಕಲಹ"ಗಳೆಂದು ಪರಿಗಣಿಸಿ ಆಡಳಿತವರ್ಗಕ್ಕೆ ಸಹಾಯಮಾಡುತ್ತಿದ್ದಾರೆ.

ಕರ್ನಾಟಕ ಪೋಲೀಸರ ಈ ಕ್ರಮವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಮತ್ತು ಮಾಲೀಕರ ಗೂಂಡಾಗಳ ವಿರುದ್ಧ ಉಗ್ರ ಕ್ರಮ ಕೈಗೊಂಡು ಮೈಕೋದಲ್ಲಿ ಶಾಂತಿ ತರಬೇಕೆಂದು ಸಿ. ಐ. ಟಿ. ಯು. ಒತ್ತಾಯಿಸುತ್ತದೆ.

ಕರ್ನಾಟಕ ಸರ್ಕಾರದ ಈ ದುಷ್ಟ ಕ್ರಮವನ್ನು ಖಂಡಿಸಿ, ಅದನ್ನು ರದ್ದುಪಡಿಸಲು ಒತ್ತಾಯಿಸುವಂತೆ ತನ್ನ ಎಲ್ಲ ಅಂಗಸಂಸ್ಥೆಗಳಿಗೆ ಸಿ. ಐ. ಟಿ. ಯು. ಮನವಿ ಮಾಡುತ್ತದೆ.

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ಸಾಲದಿಂದ ಮುಗ್ಗರಿಸುತ್ತಿರುವ ರಾಜ್ಯಗಳು

ನಮ್ಮ ಸಂವಿಧಾನವು ಒಕ್ಕೂಟ ಪದ್ಧತಿಯ ತತ್ವಕ್ಕೊಳಗಾಗಿದ್ದು, ಪ್ರತಿಯೊಂದು ರಾಜ್ಯವೂ ಆರ್ಥಿಕ, ಆಡಳಿತ, ಸಾಂಸ್ಕೃತಿಕ ಮುಂತಾದ ವಿಷಯಗಳಲ್ಲಿ ಸಾಕಷ್ಟು ಸ್ವಾಯತ್ತತೆ (autonomy) ಹೊಂದಿರಬೇಕಿತ್ತು. ಆದರೆ, ಸ್ವಾತಂತ್ರ್ಯಾನಂತರದ ಮೂರು ದಶಕಗಳಿಗೂ ಹೆಚ್ಚಿನ ಕಾಲಾವಧಿಯ ಅನುಭವದಲ್ಲಿ ಎಲ್ಲಾ ಅಧಿಕಾರಗಳೂ ಕೇಂದ್ರಸರ್ಕಾರದೊಡನೆ ಕೇಂದ್ರೀಕೃತವಾಗುತ್ತಿವೆ ಮತ್ತು ರಾಜ್ಯಸರಕಾರಗಳು ಕೇಂದ್ರಸರಕಾರದ ಕೃಪಾಕಟಾಕ್ಷವನ್ನು ನಿರೀಕ್ಷಿಸುವ ಮುನಿಸಿಪಾಲಿಟಿಗಳಂತಾಗಿವೆ! ವರ್ಷವರ್ಷ ಹೋದಂತೆ, ಯೋಜನೆಯ ನಂತರ ಯೋಜನೆಯಲ್ಲಿ ಕೇಂದ್ರದ ಋಣಭಾರದಿಂದ ರಾಜ್ಯಗಳು ಮುಗ್ಗರಿಸುತ್ತಿವೆ.

ಸಾಲದ ಹೊರೆ :

ಯೋಜನೆಯ ಯುಗ ಪ್ರಾರಂಭವಾಗುವ ಮೊದಲು 1951ರ ಮಾರ್ಚ್ 31ರಲ್ಲಿ ಎಲ್ಲಾ ರಾಜ್ಯಗಳ ಒಟ್ಟು ಸಾರ್ವಜನಿಕ ಸಾಲವು ರೂ. 245 ಕೋಟಿಗಳಷ್ಟಾಗಿತ್ತು. ಮುಂದೆ 27 ವರ್ಷಗಳಲ್ಲಿ, 1977-78ರಲ್ಲಿ ರಾಜ್ಯಗಳ ಸಾಲದ ಹೊರೆಯು ರೂ. 17,227ಕೋಟಿಗಳಿಗೇರಿತು, ಅಂದರೆ, ಪ್ರತಿ ಎರಡು ವರ್ಷಗಳಲ್ಲಿ ರಾಜ್ಯಗಳ ಸಾಲದ ಹೊರೆಯು ಮೂರು ಪಟ್ಟು ಹೆಚ್ಚುತ್ತಾ, 27 ವರ್ಷಗಳಲ್ಲಿ 70 ರಷ್ಟು ಹೆಚ್ಚಾಯಿತು! 1979-80ರಲ್ಲಿ ರಾಜ್ಯಗಳ ಸಾಲದ ಹೊರೆಯು ರೂ. 21,780 ಕೋಟಿಗೇರಿದೆ. ಅಂದರೆ ಮುಂದಿನ ಎರಡೇ ವರ್ಷಗಳಲ್ಲಿ ರೂ. 4553 ಕೋಟಿಗಳಷ್ಟು, ಶೇ. 26 ರಷ್ಟು ರಾಜ್ಯಗಳ ಸಾಲದ ಹೊರೆಯು ಹೆಚ್ಚಾಯಿತು.

ರಾಜ್ಯಗಳ ಸಾರ್ವಜನಿಕ ಸಾಲದಲ್ಲಿ ಕೇಂದ್ರದಿಂದ ಪಡೆದ ಸಾಲವೇ ಸಿಂಹಪಾಲಾದಿರುವುದು. 1951ರ ಮಾರ್ಚ್ 31ರಲ್ಲಿ ರಾಜ್ಯಗಳು ಕೇಂದ್ರಕ್ಕೆ ಮರಳಿಸಬೇಕಾದ ಸಾಲದ ಮೊತ್ತವು ರೂ. 155 ಕೋಟಿಗಳಷ್ಟಾದಿತ್ತು. ಅಂದರೆ, ಅವುಗಳ ಒಟ್ಟು ಸಾರ್ವಜನಿಕ ಸಾಲದ ಶೇ. 63ರಷ್ಟು. 1977–78ರಲ್ಲಿ ರಾಜ್ಯಗಳು ಕೇಂದ್ರಕ್ಕೆ ಮರಳಿಸಬೇಕಾದ ಸಾಲದ ಮೊತ್ತವು ರೂ. 11,561 ಕೋಟಿಗಳಷ್ಟಾಯಿತು, ಒಟ್ಟು ಸಾಲದ ಶೇ. 67ರಷ್ಟು. ಸದ್ಯ ರಾಜ್ಯಗಳ ಸಾಲದ ಶೇ. 70ಕ್ಕಿಂತಲೂ ಹೆಚ್ಚು ಕೇಂದ್ರಕ್ಕೆ ಮರಳಿಸುವಂತದ್ದು. ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳು ಹೆಚ್ಚಿದಂತೆ, ರಾಜ್ಯಗಳು ಕೇಂದ್ರವನ್ನು ಸಾಲಕ್ಕಾಗಿ ಅವಲಂಬಿಸುವುದು ಹೆಚ್ಚಾಗುತ್ತಾ ಬಂತು. 1978-79ರಲ್ಲಿ ರಾಜ್ಯಗಳಿಗೆ ಕೇಂದ್ರದ ಸಾಲವು ರೂ. 15,370 ಕೋಟಿಯಾಗಿದ್ದು, 1951ರಿಂದ ಸುಮಾರು 100 ಪಾಲು ಹೆಚ್ಚಾದಂತಾಯಿತು!

ರಾಜ್ಯಗಳಿಗೆ ಕೇಂದ್ರದ ಸಾಲವು ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ರೂ. 788 ಕೋಟಿಗಳಷ್ಟು ಹೆಚ್ಚಾಯಿತು; ಎರಡನೇ ಯೋಜನೆಯಲ್ಲಿ ರೂ. 1171 ಕೋಟಿಗಳಷ್ಟು ಹೆಚ್ಚಾಯಿತು; ಮೂರನೇ ಯೋಜನೆಯಲ್ಲಿ ರೂ. 2087 ಕೋಟಿಗಳಷ್ಟು ಹೆಚ್ಚಾಯಿತು; ನಾಲ್ಕನೇಯ ಯೋಜನೆಯಲ್ಲಿ ರೂ. 3107 ಕೋಟಿಗಳಷ್ಟು ಹೆಚ್ಚಾಯಿತು; ಮತ್ತು ಐದನೇ ಯೋಜನೆಯಲ್ಲಿ ರಾಜ್ಯಗಳಿಗೆ ಕೇಂದ್ರದ ಸಾಲವು ರೂ. 5240 ಕೋಟಿಗಳಷ್ಟು ಹೆಚ್ಚಾಯಿತು. ಪರಿಣಾಮವಾಗಿ, ರಾಜ್ಯಗಳಿಗೆ ಆಡಳಿತ ವೆಚ್ಚಗಳನ್ನು ನೀಗಿಸಿಕೊಂಡು, ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸಿಕೊಂಡು ಕೇಂದ್ರದ ಸಾಲವನ್ನು ಮರುಪಾವತಿ ಮಾಡುವುದು ಮತ್ತು ಸಾಲದ ಮೇಲಿನ ಬಡ್ಡಿ ಪಾವತಿಮಾಡುವುದು ಒಂದು ದೊಡ್ಡ ಸಮಸ್ಯೆ ಆಯಿತು.

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರವು ರಾಜ್ಯಗಳಿಗೆ ರೂ. 56ಕೋಟಿಗಳಷ್ಟು ಸಾಲನೀಡಿತ್ತು. ಈ ಯೋಜನೆಯ ಅವಧಿಯಲ್ಲಿ ರಾಜ್ಯಗಳು ರೂ. 8 ಕೋಟಿಗಳಷ್ಟು ಕೇಂದ್ರಕ್ಕೆ ಸಾಲ ಮರುಪಾವತಿ ಮಾಡಿದ್ದವು. ಹೀಗಾಗಿ, ರಾಜ್ಯಗಳು ಕೇಂದ್ರದಿಂದ ನಿವ್ವಳ (net) ರೂ. 48 ಕೋಟಿ ಸಾಲ ಪಡೆದಂತಾಯಿತು. ಅಂದರೆ ಕೇಂದ್ರದ ಸಾಲದ ಶೇ. 86 ಅಂಶದಷ್ಟು ರಾಜ್ಯಗಳು ನಿವ್ವಳ ಸಾಲ ಪಡೆದಂತಾಯಿತು. ಆದರೆ ಮುಂದೆ ವರ್ಷಗಳು ಉರುಳಿದಂತೆ, ಯೋಜನೆಗಳು ಒಂದಾದ ಮೇಲೆ ಮುಗಿದಂತೆ, ಕೇಂದ್ರವು ರಾಜ್ಯಗಳಿಗೆ ಕೊಡುವ ಸಾಲದ ಮೊತ್ತವು ಗಣನೀಯವಾಗಿ ಹೆಚ್ಚುತ್ತಾ ಬಂದರೂ, ರಾಜ್ಯಗಳು ಕೇಂದ್ರದ ಸಾಲಮರುಪಾವತಿ ಮಾಡಿದ ಮೇಲೆ ಕೇಂದ್ರದಿಂದ ಪಡೆಯುವ ನಿವ್ವಳ ಸಾಲದ ಪ್ರಮಾಣವು ಕಡಿಮೆಯಾಗುತ್ತಾ ಬಂತು. ನಾಲ್ಕನೇ ಯೋಜನೆಯಲ್ಲಿ ಕೇಂದ್ರವು ರಾಜ್ಯಗಳಿಗೆ ರೂ. 1553 ಕೋಟಿ ಸಾಲನೀಡಿತ್ತು. ರಾಜ್ಯಗಳು ಈ ಅವಧಿಯಲ್ಲಿ ಕೇಂದ್ರಕ್ಕೆ ರೂ. 934 ಕೋಟಿ ಸಾಲ ಮರುಪಾವತಿಮಾಡಿತ್ತು. ಅಂದರೆ ಸಾಲಪಡೆದ ಶೇ. 60ರಷ್ಟು ಸಾಲ ಮರುಪಾವತಿಗೇ ವಿನಿಯೋಗವಾಯಿತು! ಕೇವಲ ಶೇ. 40ರಷ್ಟು ಮಾತ್ರ ಕೇಂದ್ರದಿಂದ ನಿವ್ವಳ ಸಾಲ 1973-74ರಷ್ಟರಲ್ಲಿ ಸಿಕ್ಕಿದಂತಾಯಿತು. ಇತ್ತೀಚಿನ ವರ್ಷಗಳಲ್ಲಿ ರಾಜ್ಯಗಳು ಕೇಂದ್ರದಿಂದ ಪಡೆಯುವ ನಿವ್ವಳ ಸಾಲದ ಅಂಶವು ಇನ್ನೂ ಕಡಿಮೆಯಾಗುತ್ತಿದೆ.

ಬಡ್ಡಿಯಭಾರ :

ರಾಜ್ಯಗಳು ಕೇಂದ್ರಕ್ಕೆ ವರ್ಷ ವರ್ಷವೂ ಹೆಚ್ಚು ಹೆಚ್ಚು ಸಾಲ ಮರುಪಾವತಿ ಮಾಡುವುದರೊಂದಿಗೇ, ಸಾಲದ ಬಡ್ಡಿಯ ವೆಚ್ಚವನ್ನೂ ಸಾಲ ವ್ಯವಹಾರಗಳ ಆಡಳಿತ ವೆಚ್ಚವನ್ನೂ ವಹಿಸಿಕೊಳ್ಳಬೇಕು. 1951ರಲ್ಲಿ ರಾಜ್ಯಗಳು ಕೇಂದ್ರದ ಸಾಲದ ಮೇಲೆ ಶೇ. 1.84ರಷ್ಟು ಬಡ್ಡಿ ಕೊಡಬೇಕಾದಿದ್ದರೆ, 1979–80ರಲ್ಲಿ ಬಡ್ಡಿದರವು ಶೇ. 4.8ರಷ್ಟಾಗಿದೆ. ಬಡ್ಡಿದರದ ಅರ್ಧದಷ್ಟು ಆಡಳಿತ ವೆಚ್ಚವೆಂದು ಅಂದಾಜು ಮಾಡಿದರೂ ರಾಜ್ಯ ಸರಕಾರಗಳು ಕೇಂದ್ರದ ಸಾಲದ ಮೇಲೆ 1951ರಲ್ಲಿ ಒಟ್ಟು ಶೇ. 2.9ರಷ್ಟು ಬಡ್ಡಿ ಮತ್ತು ಆಡಳಿತ ವೆಚ್ಚವಹಿಸಬೇಕಿತ್ತು, 1979–80ರಲ್ಲಿ ಶೇ. 7.2 ರಷ್ಟು ವೆಚ್ಚ ವಹಿಸಬೇಕಾಗಿತ್ತು. 1950–51ರಲ್ಲಿ ರಾಜ್ಯಗಳು ಕೇಂದ್ರದ ಸಾಲದ ಮೇಲೆ ರೂ. 5 ಕೋಟಿ ಬಡ್ಡಿ ಕೊಡಬೇಕಾಗಿತ್ತು. 1979-80 ರಲ್ಲಿ ಈ ಬಡ್ಡಿಯ ಮೊತ್ತ ರೂ. 1037.2 ಕೋಟಿಗೇರಿದೆ! ಅಂದರೆ, ಈ ಅವಧಿಯಲ್ಲಿ ರಾಜ್ಯಗಳು ಕೇಂದ್ರದ ಸಾಲದ ಮೇಲೆ ಕೊಡುವ ಬಡ್ಡಿಯ ಭಾರವು 206 ಪಾಲು ಹೆಚ್ಚಾಯಿತು! ಆದರೆ, ಈ ಅವಧಿಯಲ್ಲಿ ರಾಜ್ಯಗಳ ಆದಾಯವು ಕೇವಲ 33 ಪಾಲು ಹೆಚ್ಚಾದಿತ್ತು. 1950-51ರಲ್ಲಿ ರೂ. 387.2ಕೋಟಿ ಮತ್ತು 1979–80ರಲ್ಲಿ ರೂ. 13,204.4 ಕೋಟಿ. ರಾಜ್ಯಗಳ ಆದಾಯ ಹಾಗೂ ವೆಚ್ಚಗಳಲ್ಲಿ ಕೇಂದ್ರದ ಸಾಲದ ಮೇಲಿನ ಬಡ್ಡಿಯ ವೆಚ್ಚ ಮತ್ತು ಆಡಳಿತ ವೆಚ್ಚಗಳ ಪ್ರಮಾಣವು ಹೆಚ್ಚುತ್ತ ಇದೆ.

ಕೇಂದ್ರದಿಂದ ಪಡೆದ ಸಾಲದ ಬಹುಪಾಲನ್ನು ರಾಜ್ಯಗಳು ಆರ್ಥಿಕ ಅಭಿವೃದ್ಧಿಗೆ ವಿನಿಯೋಗಿಸಲಾರದೆ, ಕೇಂದ್ರದಿಂದ ಪಡೆದ ಹಳೆಯ ಸಾಲದ ಮರುಪಾವತಿಗೇ ಹೆಚ್ಚು ಹೆಚ್ಚಾಗಿ ವಿನಿಯೋಗಿಸುವುದರಿಂದ, ರಾಜ್ಯಗಳ ಋಣಭಾರವು ಹೆಚ್ಚುತ್ತಲೇ ಇದೆ. ರಾಜ್ಯಗಳ ಆದಾಯವು ಸ್ಥಿರವಾದಿರುವುದರಿಂದ, ಸ್ಥಗಿತವಾಗಿರುವುದರಿಂದ ಕೇಂದ್ರದ ಸಾಲ ಮರುಪಾವತಿಯು ರಾಜ್ಯಗಳ ಹಣಕಾಸು ಪರಿಸ್ಥಿತಿಯ ಮೇಲೆ ತೀವ್ರ ದುಷ್ಪರಿಣಾಮಗಳನ್ನು ಬೀರುತ್ತವೆ. ರಾಜ್ಯಗಳ ಸದ್ಯದ ಪರಿಸ್ಥಿತಿಯು ಭಾರತದ ಬಡರೈತನ ಪರಿಸ್ಥಿತಿಯಂತೆಯೇ ಆಗಿದೆ. ಸಾಲ ತೀರಿಸಲಿಕ್ಕೆ ಹೊಸಸಾಲ, ಸಾಲದ ಬಂಧನದಿಂದ ಪಾರಾಗಲು ಸಾಧ್ಯವೇ ಇಲ್ಲ!

ಸಾಲ ತೀರಿಸಲು ಸಾಲ :

ಈ ಕೆಳಗಿನ ಕೋಷ್ಟಕ ರಾಜ್ಯಗಳ ಕೇಂದ್ರದ ಸಾಲದ ಹೊರೆಯ ಸ್ಪಷ್ಟ ಕಲ್ಪನೆ ಕೊಡುವುದು.

1969-70ರಲ್ಲಿ ಕೇಂದ್ರವು ರಾಜ್ಯಗಳಿಗೆ ನೀಡಿದ ರೂ. 1030.8ಕೋಟಿ ಸಾಲದಲ್ಲಿ, ರಾಜ್ಯಗಳು ರೂ. 607.8 ಕೋಟಿ ಕೇಂದ್ರಕ್ಕೆ ಸಾಲ ಮರುಪಾವತಿಯ ರೂಪದಲ್ಲಿ ಕೊಡಬೇಕಾಯಿತು (ಶೇ. 59). ರೂ. 282 ಕೋಟಿ ಬಡ್ಡಿಯ ರೂಪದಲ್ಲಿ ಕೇಂದ್ರಕ್ಕೆ ಕೊಡಬೇಕಾಯಿತು (ಶೇ. 27%). ರೂ. 141 ಕೋಟಿ ಸಾಲ ನಿರ್ವಹಣೆಯ ಆಡಳಿತ ವೆಚ್ಚಕ್ಕೆ ವಿನಿಯೋಗವಾಯಿತು (ಶೇ. 14ಕ್ಕಿಂತಲೂ ಹೆಚ್ಚು). ಅಂದರೆ, ಒಟ್ಟು ರೂ. 1030.8 ಕೋಟಿ ವಿನಿಯೋಗವಾಯಿತು. ಕೇಂದ್ರವು ಸಾಲ ಕೊಟ್ಟದ್ದಕ್ಕಿಂತ ರಾಜ್ಯಗಳ ವೆಚ್ಚವು ಸಾಲ ಮರುಪಾವತಿ, ಬಡ್ಡಿ ಹಾಗೂ ಆಡಳಿತ ಖರ್ಚುಗಳ ರೂಪದಲ್ಲಿ ರೂ. 1.3 ಕೋಟಿಯಷ್ಟು ಹೆಚ್ಚಾಯಿತು. ಅಂದರೆ ರಾಜ್ಯಗಳು ಇತರ ಮೂಲಗಳಿಂದಲೂ ಸಂಪನ್ಮೂಲಗಳಿಸಿ ಕೇಂದ್ರದ ಸಾಲ ಬಡ್ಡಿ ತೀರಿಸುವ ಪರಿಸ್ಥಿತಿ ಒದಗಿಬಂತು. 1973-74 ಮತ್ತು 1976-77 ರಲ್ಲಿ ರೂ. 5.5 ಕೋಟಿ ಹಾಗೂ ರೂ. 1.3 ಕೋಟಿ ಇದೇ ರೀತಿ ಕೊರತೆ ಉಂಟಾಯಿತು. 1979-80 ರಲ್ಲಿ ಕೇಂದ್ರವು ರಾಜ್ಯಗಳ ಸಾಲದಲ್ಲಿ ಸ್ವಲ್ಪ ರಿಯಾಯಿತಿ ತೋರಿಸಿದುದರಿಂದ ಕೇಂದ್ರದ ನಿವ್ವಳ ಸಾಲವು ರೂ. 561.9 ಕೋಟಿಗಳಷ್ಟಾಯಿತು.

ರಾಜ್ಯಗಳ ಸ್ವಾಯತ್ತತೆಗೆ ಅಪಾಯ :

ರಾಜ್ಯಗಳು ಕೇಂದ್ರದ ಸಾಲದಿಂದ ಬಿಡುಗಡೆಯಾಗದೆ, ಸಾಲವನ್ನು ತೀರಿಸಲಿಕ್ಕೇ ಮತ್ತಷ್ಟು ಸಾಲ ಕೇಂದ್ರದಿಂದ ಪಡೆಯಬೇಕಾಗುವುದರಿಂದ ಕೇಂದ್ರ-ರಾಜ್ಯಗಳ ಸಂಬಂಧ ಹದಗೆಡುವುದು. ರಾಜ್ಯಗಳು ತಮ್ಮ ಅಲ್ಪಸ್ವಲ್ಪ ಸ್ವಾಯತ್ತತೆಯನ್ನೂ ಕಳೆದುಕೊಳ್ಳುವವು. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬೇರೆಬೇರೆ ರಾಜಕೀಯ ಪಕ್ಷಗಳ ಆಡಳಿತವಿದ್ದರಂತೂ ಕೇಂದ್ರ ಸರಕಾರವು ರಾಜ್ಯಸರಕಾರವನ್ನು ಸಾಕಷ್ಟು ಸಂಕಷ್ಟಗಳಿಗೆ ಸಿಲುಕಿಸಬಹುದು. ಹಳೆಯ ಸಾಲ ತೀರಿಸಿದರೇ ಹೊಸ ಸಾಲಕೊಡುವುದಾಗಿ ಗದರಿಸಬಹುದು. ಸದ್ಯ ಇಂದಿರಾ ಆಳ್ವಿಕೆಯ ಕೇಂದ್ರಸರಕಾರವು ಎಡರಂಗ ಆಳ್ವಿಕೆಯಿರುವ ಪ. ಬಂಗಾಳ, ತ್ರಿಪುರಾ ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಸಂಯುಕ್ತರಂಗದ ಆಳ್ವಿಕೆಯಿರುವ ಕೇರಳ ರಾಜ್ಯಸರಕಾರಗಳಿಗೆ ಇಂತಹ ಬೆದರಿಕೆಗಳನ್ನು ಒಡ್ಡುತ್ತಿದೆ. ಈ ರಾಜ್ಯಗಳಿಗೆ ಜನರ ಆಶೋತ್ತರಗಳನ್ನು ಈಡೇರಿಸಲು ಮತ್ತು ಸಂವಿಧಾನದಲ್ಲಿ ನಮೂದಿಸಿದ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾಕಷ್ಟು ಸಂಪನ್ಮೂಲಗಳ ಕೊರತೆ ಇದೆ. ಅವುಗಳು ಇತರ ರಾಜ್ಯಗಳಂತೆ ಕೇಂದ್ರದ ಋಣಭಾರದಲ್ಲಿ ಮುಗ್ಗರಿಸುತ್ತಿವೆ.

ಕೆಲವು ತುರ್ತಿನ ಕ್ರಮಗಳು :

ಬಂಡವಾಳಶಾಹಿ ಸಮಾಜದಲ್ಲಿ ಅಧಿಕಾರ ಸಂಪತ್ತುಗಳ ಕೇಂದ್ರೀಕರಣ

(7ನೇ ಪುಟ ನೋಡಿ)

(ರೂ. ಕೋಟಿಗಳಲ್ಲಿ)

		1969-70	1973-74	1976-77	1979-80
1,	ರಾಜ್ಯಗಳು ಕೇಂದ್ರಕ್ಕೆ ಸಾಲ ಮರುಪಾವತಿ ಮಾಡಿದ ಮೊತ್ತ	607.8	933.9	719.3	604,7
2,	ಕೇಂದ್ರಕ್ಕೆ ಕೊಟ್ಟ ಬಡ್ಡಿ	282.0	417.0	485.5	637,2
3,	ಒಟ್ಟು ಕೇಂದ್ರಕ್ಕೆ ರಾಜ್ಯಗಳು ಕೊಟ್ಟ ಮೊತ್ತ (2+3)	889.8	1350.9	1204.8	1241,9
4.	ರಾಜ್ಯಗಳ ಆಡಳಿತ ವೆಚ್ಚ	141.0	208.5	242.7	318,6
5,	ಸಾಲದ ಕುರಿತಾದ ಒಟ್ಟು ವೆಚ್ಚ (3+4)	1030.8	1559.4	1447,5	1560.5
6.	ಕೇಂದ್ರವು ರಾಜ್ಯಗಳಿಗೆ ನೀಡಿದ ಒಟ್ಟು ಸಾಲ	1029.5	1552,9	1446,2	2122,4
7.	ಕೇಂದ್ರದಿಂದ ರಾಜ್ಯಗಳಿಗೆ ಸಿಕ್ಕಿದ ನಿವ್ವಳ ಸಾಲ (7—6)	-1,3	-5.5	-1.3	+561,9

(ಆಧಾರ : ಈ ಕೋಷ್ಟಕ ಮತ್ತಿತರ ಅಂಕಿಸಂಖ್ಯೆಗಳು : ರಿಸರ್ವ್ ಬ್ಯಾಂಕ್ ಬುಲೆಟಿನ್, ಸೆಪ್ಟಂಬರ್, 1978 ಮತ್ತು ಸೆಪ್ಟಂಬರ್-ಅಕ್ಟೋಬರ್ 1979, ಫೈನಾನ್ಸಿಯಲ್ ಎಕ್ಸ್‌ಪ್ರೆಸ್ ತಾ. 4-4-80ರಂದು ಎಸ್. ಬಾಪಟ್ ಅವರ ಲೇಖನದಲ್ಲಿ ಪ್ರಕಟವಾದದ್ದು).

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

(ಕೇರಳಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ)

ಭಾರತದ ಮತ್ತು ವಿದೇಶದ ಅನೇಕ ವಿದ್ವಾಂಸರು, ಕೇರಳವನ್ನು ಜಾತಿಯಿಂದಾವೃತವಾದ ರಾಜ್ಯವೆಂದೂ, ಅಲ್ಲಿನ ಪ್ರತಿಯೊಂದು ರಾಜಕೀಯ ಪಕ್ಷವೂ ಒಂದಲ್ಲ ಒಂದು ಜಾತಿಯ ಆಧಾರದ ಮೇಲೆ ಇದೆಯೆಂದು ಪರಿಗಣಿಸುತ್ತಾರೆ. ಹಳೆಯ ತಿರುವಾಂಕೂರು-ಕೊಚ್ಚಿನ್ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಕ್ರೈಸ್ತರು ಮತ್ತು ನಾಯ್ಯರ್‌ರನ್ನು ಅವಲಂಬಿಸಿದಂತೆ ಕಾಣುತ್ತದೆ. ಹಾಗೆಯೇ ಕಮ್ಯುನಿಸ್ಟ್ ಚಳುವಳಿಯ ಮೂಲ ಎಳವ ಜಾತಿ, ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಇತರ ಕೋಮಿನಲ್ಲಿ ಬೇರು ಬಿಟ್ಟಂತೆ ಕಂಡುಬರುತ್ತದೆ. ಮುಸ್ಲಿಂ ಲೀಗ್ ಅನುಮಾನವೇ ಇಲ್ಲದೆ ಮುಸ್ಲಿಮರ ರಾಜಕೀಯ ಸಂಸ್ಥೆಯೇ ಆದಿದೆ, ಈ ಬಗೆಯ ವಿಶ್ಲೇಷಣೆಯ ಮೇಲೆ ಈ ಸಿದ್ಧಾಂತವೆಲ್ಲಾ ನಿಂತಿದೆ.

ಜಾತಿ ಮತ್ತು ರಾಜಕೀಯ ಪಕ್ಷಗಳ ನಡುವೆ ಪರಸ್ಪರ ಸಂಬಂಧವಿದೆ ಎಂಬ ಸಿದ್ಧಾಂತದಲ್ಲಿ ಸತ್ಯಾಂಶವಿಲ್ಲ ಎಂಬುದನ್ನು ವಾದಮಾಡಿ ತೋರಿಸುವುದು ಈ ಲೇಖಕನ ಕೆಲಸವಲ್ಲ. ತಾವು ತುಂಬಾ ಜಾತ್ಯಾತೀತ ಪಕ್ಷಗಳೆಂದು ಹೇಳಿಕೊಳ್ಳುವ ರಾಜಕೀಯ ಪಕ್ಷಗಳು ಕೂಡ ಜಾತಿ ಕೋಮು ಇವುಗಳನ್ನು ಗಣನೆಗೆ ತಂದುಕೊಳ್ಳುವುದಿಲ್ಲವೆಂದು ಹೇಳಿಕೊಂಡರೂ, ಜಾತಿ ಒಂದೇ ಅಂಶವಲ್ಲದಿದ್ದರೂ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಚುನಾವಣೆಗೆ ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಇದನ್ನು ಪ್ರಮುಖ ಅಂಶವಾಗಿ ಪರಿಗಣಿಸಬೇಕಾಗುತ್ತದೆ ಎಂಬುದಕ್ಕೆ ನಾವು ಕಣ್ಮುಚ್ಚುವುದು ಅವಾಸ್ತವವಾಗುತ್ತದೆ. ಜಾತಿ ಮತ್ತು ಕೋಮುಗಳ ಎಲ್ಲೆಯನ್ನು - ಮೀರಿ ಹೋಗುವ ವರ್ಗಗಳು ಮತ್ತು ರಾಜಕೀಯ ಪಕ್ಷಗಳು ನಿಧಾನವಾಗಿ ಜಾತಿ ಅಥವಾ ಕೋಮುಗಳ ಅಂಶವನ್ನು ಮುಚ್ಚಿಬಿಡುತ್ತದೆ ಎಂಬುವ ವಿಚಾರವೂ ಇದೆ.

ಈ ಸಮಸ್ಯೆಯ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆಯಲು, ಕೇವಲ ಕೇರಳದಲ್ಲಿ ಮಾತ್ರವಲ್ಲದೆ ದೇಶದಲ್ಲೆಲ್ಲಾ ಜಾತಿ ಮತ್ತು ಕೋಮುಗಳ ರಾಜಕೀಯವೂ ಸೇರಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಮುಖವಾದ ಪಾತ್ರವಹಿಸುತ್ತದೆ ಎಂಬುವುದನ್ನು ತಿಳಿಯುವುದು ಅಗತ್ಯ. ಕೇರಳದಲ್ಲಿ ಎಳವ-ನಾಯರ್, ಕ್ರಿಶ್ಚಿಯನ್ನರು, ಮುಸ್ಲೀಮರು ರಾಜಕೀಯ ಜೀವನದಲ್ಲಿ ಪ್ರಮುಖ ಪಾತ್ರವಹಿಸುವಂತೆ ಉಳಿದ ರಾಜ್ಯಗಳಲ್ಲಿ, ಅಂದರೆ ಉತ್ತರ ಭಾರತದಲ್ಲಿ ಜಾತ್-ಖತ್ರಿ ಮತ್ತು ಬ್ರಾಹ್ಮಣರು, ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರು; ಆಂಧ್ರದಲ್ಲಿ ಕಮ್ಮ ಮತ್ತು ರೆಡ್ಡಿಗಳು ಅಷ್ಟೇ ಪ್ರಮುಖ ಪಾತ್ರ ವಹಿಸುತ್ತಾರೆ. ಆದ್ದರಿಂದ ಈ ಸಮಸ್ಯೆ ಕೇರಳಕ್ಕೆ ಮಾತ್ರ ವಿಶಿಷ್ಟವಾದ ಲಕ್ಷಣವೆಂದು ವಿಶ್ಲೇಷಿಸಿದರೆ ಅದು ಪೂರ್ತಿಯಾಗಿ ತಪ್ಪಾಗುತ್ತದೆ.

ನಮ್ಮ ಮುಂದಿರುವ ಪ್ರಶ್ನೆ ಎಂದರೆ ಇದು ಯಾಕೆ ಹೀಗೆ ಆಗಿದೆ? ಜಗತ್ತಿನ ಉಳಿದ ದೇಶಗಳಿಗಿಂತ ಭಿನ್ನವಾಗಿ ಭಾರತ ಜಾತಿ-ಉಪಜಾತಿಗಳ ಆಧಾರದ ಮೇಲೆ ಬೆಳವಣಿಗೆಯಾಗಿರುವ ಸಾಮಾಜಿಕ ಸಂಸ್ಥೆ ಇರುವುದರಿಂದ, ರಾಜಕೀಯವೂ ಸೇರಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಯಾರೇ ಆಗಲೀ ಜನತೆಯ ರಾಜಕೀಯ ಪ್ರಜ್ಞೆಯ ಮೇಲೆ ಜಾತಿಗಳ ಪ್ರಭಾವ ಎಷ್ಟಾಗಿದೆ ಎಂಬುದನ್ನು ಗಮನಿಸಲೇಬೇಕಾಗುತ್ತದೆ.

ಇದಕ್ಕೆ ಉತ್ತರ ಖಚಿತವಾಗಿಯೇ ಹುಡುಕಬೇಕಾಗುತ್ತದೆ. ಭಾರತದಲ್ಲಿ ಹೊಸ ರೀತಿಯ ಸಾಮಾಜಿಕ ಸಂಸ್ಥೆಯ ವಿಧಾನಕ್ಕೆ ದಾರಿ ಮಾಡಿಕೊಡಲು ಮೂಲಭೂತವಾಗಿ 'ಚಾತುರ್ವರ್ಣ್ಯ' ಎಂದು ಕರೆಸಿಕೊಂಡು ಇದ್ದ ಹಿಂದಿನ ಬುಡಕಟ್ಟು ಸಮಾಜ ಬಲವಂತವಾಗಿ ಬೇರ್ಪಟ್ಟಿತ್ತು. ಆದರೆ ಅನಂತರ ಇವು ಅಸಂಖ್ಯಾತ ಜಾತಿ ಉಪಜಾತಿಗಳ ವಂಶಗಳಾಗಿ ತನಗೆ ತಾನೇ ಬೆಳೆಯಿತು.

ಮಾನವ ಚರಿತ್ರೆ : ಬುಡಕಟ್ಟು ಸಮಾಜದಿಂದ ವರ್ಗಸಮಾಜದ ಕಡೆಗೆ :

ಪ್ರಪಂಚದ ಇತರ ಯಾವುದೇ ದೇಶಗಳಲ್ಲಿದ್ದಂತೆಯೇ ಭಾರತದಲ್ಲಿ ಕೂಡ ಪ್ರಾಗೈತಿಹಾಸಿಕ ಕಾಲದಲ್ಲಿ ಬುಡಕಟ್ಟು ಸಮಾಜ ಇತ್ತೆಂದು ತಿಳಿದು ಬರುತ್ತದೆ. ಆ ಸಮಾಜಕ್ಕೆ ಜಾತಿ-ಕೋಮುವರ್ಗವನ್ನವಲಂಬಿಸಿದ ಅಸಮಾನತೆ ಏನೆಂದೇ ತಿಳಿದಿರಲಿಲ್ಲ. ಇದೂ ಅಲ್ಲದೆ ಗಂಡು ಹೆಣ್ಣಿನ ನಡುವೆ ಹೆಚ್ಚುಕಮ್ಮಿ ಎಂಬ ಬೇಧ ಭಾವವೇ ಇರಲಿಲ್ಲ.

ಈ ರೀತಿಯ ಹಳೆಯ ಸಾಮಾಜಿಕ ಪದ್ಧತಿ ಮಾವೆಲಿಗಳ ಕಾಲದಲ್ಲಿದ್ದು ವಾಮನರು ಮಾವೆಲಿಗಳನ್ನು ಪಾತಾಳಕ್ಕೆ ತುಳಿದರು ಎಂಬುದು ಕೇರಳದ ಜಾನಪದದಲ್ಲಿ ಇನ್ನೂ ಬದುಕಿದೆ. "ಜನರಲ್ಲಿ ಸಮಾನತೆ ಇತ್ತು" "ಸುಳ್ಳು ಮೋಸ ಇರಲಿಲ್ಲ" ಎಂದು ಆ ದಿನಗಳನ್ನು ನೆನಸಿಕೊಳ್ಳುವ ಜನಪ್ರಿಯವಾದ ಹಾಡಿನಲ್ಲಿ ಆ ಪ್ರಾಚೀನ ಕಾಲದ ನೆನಪು ಇನ್ನೂ ಹಸಿರಾಗಿ ಉಳಿದಿರುವುದನ್ನು ಕಾಣಬಹುದು. ಪ್ರತಿ ವರ್ಷವೂ ಒಂದು ನಿರ್ದಿಷ್ಟವಾದ ದಿನದಲ್ಲಿ ಹೊರದೂಡಲ್ಪಟ್ಟ ಮಾವೆಲಿಗಳು ತಮ್ಮ ಪ್ರಜೆಗಳು ವರ್ಷದಿಂದ ವರ್ಷಕ್ಕೆ ಹೇಗೆ ಬದುಕುತ್ತಿದ್ದಾರೆಂದು ನೋಡುವುದಕ್ಕೆ ಕೇರಳಕ್ಕೆ ಹಿಂದಕ್ಕೆ ಬರುತ್ತಾರೆಂದು ಭಾವಿಸಲಾಗಿದೆ. ಕೇರಳದ ಪ್ರತಿಯೊಂದು ಕುಟುಂಬವೂ ತಮ್ಮ ಶಕ್ತ್ಯಾನುಸಾರ ಸಾಕಷ್ಟು ವೈಭವದಿಂದ ಈ ದಿನವನ್ನು ಆಚರಿಸುತ್ತಾರೆ. (ಓಣಂ)

ಈ ರೀತಿಯ ಪ್ರಾಗೈತಿಹಾಸಿಕ ಸಮಾಜವು ಜಗತ್ತಿನ ಎಲ್ಲಾ ಕಡೆಯಲ್ಲೂ ಅಸ್ತಿತ್ವದಲ್ಲಿದ್ದು, ಇದನ್ನು ಮಾರ್ಕ್ಸ್‌ವಾದೀ ಪರಿಭಾಷೆಯಲ್ಲಿ "ಪ್ರಾಚೀನ ಸಮತಾವಾದ" ಎನ್ನುತ್ತಾರೆ. ಮಾರ್ಕ್ಸ್‌ವಾದಿಗಳು ಹೇಳುವ (ಇನ್ನೂ ಬರಬೇಕಾಗಿರುವ ಸಮತಾವಾದೀ ಸಮಾಜದಲ್ಲಿರುವಂತೆ ಅಸಮಾನತೆ, ಶೋಷಣೆ, ದಬ್ಬಾಳಿಕೆ ಇವುಗಳು ಇರದೆ ಇದ್ದಂತ ಸ್ಥಿತಿಯಲ್ಲಿ ಯಾವ ಗಂಡಸೂ ಅಥವಾ ಹೆಂಗಸೂ ಮತ್ತೊಬ್ಬರನ್ನು ಶೋಷಿಸುವಂತಿಲ್ಲ ಎಂಬುದನ್ನು ಈ ಸಮಾಜವೂ ಹೊಂದಿತ್ತು.

ಇ. ಎಂ. ಎಸ್. ನಂಬೂದಿರಿಪಾದ್

ಪ್ರಾಗೈತಿಹಾಸಿಕ ಸಮಾಜದಲ್ಲಿ ಸಮಾನತೆ ಎನ್ನುವುದು ಕಡಿಮೆ ಪ್ರಮಾಣದ ಉತ್ಪಾದನೆ ಮತ್ತು ಬಳಕೆಯನ್ನು ಅವಲಂಬಿಸಿತ್ತು ಎಂಬ ಅಂಶದಲ್ಲಿ ಪ್ರಾಚೀನ ಸಮತಾವಾದ ಆಧುನಿಕ ಸಮತಾವಾದಕ್ಕಿಂತ ಭಿನ್ನವಾಗಿದೆ. ಪ್ರಾಚೀನ ಸಮತಾವಾದೀ ಸಮಾಜದಲ್ಲಿ ಯಾವುದೇ ವ್ಯಕ್ತಿ ತನ್ನ ವ್ಯಯಕ್ತಿಕ ಬಳಕೆಯ ಅಗತ್ಯಕ್ಕಿಂತ ಹೆಚ್ಚು ಸಂಪತ್ತನ್ನು ಉತ್ಪಾದಿಸಲಾಗುತ್ತಿರಲಿಲ್ಲ ಎಂಬ ಸರಳ ಕಾರಣದಿಂದಲೇ ಯಾರೂ ಮತ್ತೊಬ್ಬರನ್ನು ಶೋಷಿಸಲು ಸಾಧ್ಯವಿರುತ್ತಿರಲಿಲ್ಲ. ಆದ್ದರಿಂದ ಸಮಾಜದ ಇನ್ನೊಬ್ಬ ಸದಸ್ಯನನ್ನು ಗುಲಾಮನಾಗಿ, ಜೀತದಾಳಾಗಿ, ಕೂಲಿಯಾಗಿ ಮಾಡುವುದರಿಂದ ಏನನ್ನೂ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಯುದ್ಧದಲ್ಲಿ ಸೆರೆಹಿಡಿದ ವ್ಯಕ್ತಿಗಳನ್ನು ಗುಲಾಮನನ್ನಾಗಿ ಮಾಡಿ ಒಡೆಯನಿಗಾಗಿ ದುಡಿಯುವಂತೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಒಡೆಯನಿಗೆ ಸಾಕಾಗುವಷ್ಟು ಹೆಚ್ಚುವರಿ ಉತ್ಪಾದನೆಯನ್ನು ಅವರ ಉತ್ಪಾದನಾ ಶಕ್ತಿ ಕೊಡುತ್ತಿರಲಿಲ್ಲ. ಸೆರೆಹಿಡಿದವನು ಸೆರೆಯಾಳುಗಳನ್ನು ಕೊಂದು ಅವರ ಮಾಂಸವನ್ನು ತಿನ್ನುವಂತಿದ್ದರೆ ಮಾತ್ರ ಅವನಿಗೇನಾದರೂ ಪ್ರಯೋಜನವಾಗುತ್ತಿತ್ತಷ್ಟೆ. ಪ್ರಾಗೈತಿಹಾಸಿಕ ಕಾಲದಲ್ಲಿ ಮನುಷ್ಯರನ್ನೇ ತಿನ್ನುವ ಪದ್ಧತಿ ತಿಳಿಯದ ವಿಚಾರವೇನೂ ಆಗಿರಲಿಲ್ಲ.

ಈ ರೀತಿಯ 'ಪ್ರಾಚೀನ' ಮತ್ತು 'ಸಮತಾವಾದೀ' ಸಾಮಾಜಿಕ ವ್ಯವಸ್ಥೆಯಿಂದ ಹೊರ ಬರಲು ಮಾನವ ಚರಿತ್ರೆಗೆ ಲಕ್ಷಾವಧಿ ವರ್ಷಗಳೇ ಬೇಕಾಯಿತು. ಬುಡಕಟ್ಟು ಜೀವನದಲ್ಲಿ ಬದುಕುತ್ತಿದ್ದ ಗಂಡು ಮತ್ತು ಹೆಣ್ಣು ಪ್ರಕೃತಿಯೊಡನೆ ನಿರಂತರವಾಗಿ ಹೋರಾಡುವಾಗ ಹೊಸ ಮತ್ತು ಪರಿಣಾಮಕಾರೀ ಉತ್ಪಾದನಾ ತಂತ್ರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು. ತೀಕ್ಷ್ಣವಾದ, ತುಂಬಾ ಪರಿಣಾಮಕಾರಿಯಾದ ಉಪಕರಣಗಳನ್ನು ಸೃಷ್ಟಿಸಿಕೊಳ್ಳುವುದು ಸಾಧ್ಯವಾಯಿತು. ಇದರ ಪರಿಣಾಮವಾಗಿ ಸಮಾಜದ ಉತ್ಪಾದನೆ ಒಂದೇ ಸಮನಾಗಿ ಹೆಚ್ಚುತ್ತಾ ಹೋಯಿತು. ಇದು ಯಾವ ಸ್ಥಿತಿಯನ್ನು ಮುಟ್ಟಿತೆಂದರೆ, ಪ್ರತಿ ವೈಯುಕ್ತಿಕ ಉತ್ಪಾದಕನೂ ಅವನ/ಅವಳ ಬಳಕೆಯ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಾಯಿತು.

ಈ ಹೊಸ ಪರಿಸ್ಥಿತಿಯಲ್ಲಿ ಗೆದ್ದವರು ಸೋತವರನ್ನು ಕೊಂದು ತಿನ್ನುವುದು ಅನಗತ್ಯವಾಯಿತು. ಸೆರೆಯಾಳುಗಳನ್ನು ದುಡಿಮೆಯಲ್ಲಿ ತೊಡಗಿಸಿ, ಅವರ ಪ್ರಾಣಸಮಾನವಾದ ಅಸ್ತಿತ್ವಕ್ಕೆ ಬೇಕಾದ್ದನ್ನು ಒದಗಿಸಿ, ಅವರ ಹೆಚ್ಚುವರಿ ಉತ್ಪಾದನೆಯನ್ನು ಬಳಸಿಕೊಳ್ಳುವುದು ಹೆಚ್ಚು ಲಾಭದಾಯಕವಾಗಿ ಕಂಡಿತು. ಇದೇ ಅಸಮಾನತೆಯನ್ನು ಹುಟ್ಟಿಸಿ, ಬಹುಸಂಖ್ಯಾತರ ಹೆಚ್ಚುವರಿ ಉತ್ಪಾದನೆಯನ್ನು ಕೆಲವೇ ಜನ ಬಳಸಿಕೊಳ್ಳುವಂತೆ ಆಯಿತು. ಹೀಗೆ ಬಹುಸಂಖ್ಯಾತರ ಹೆಚ್ಚುವರಿ ಉತ್ಪಾದನೆಯನ್ನು ಅಲ್ಪಸಂಖ್ಯಾತರು ಬಳಸಿಕೊಂಡಾಗ ವರ್ಗಸಮಾಜ ಹುಟ್ಟಿತು. ವಾಮನರಿಂದ ಮಾವೆಲಿಗಳು ಹೊರದೂಡಲ್ಪಟ್ಟಿದ್ದು ಈ ಬೆಳವಣಿಗೆಯ ಸಂಕೇತವೇ.

ಈ ರೀತಿಯ ಶೋಷಕ ಮತ್ತು ಶೋಷಿತರ ನಡುವಣ ಅಂತರ ಆಳವಾದಾಗ, ಅದು ಸಮಾಜಕ್ಕೊಂದು ಶಾಪವಾಗಿ, ಅದು ಸಮಾಜವನ್ನು ಶಾಶ್ವತವಾದ ನರಳಿಕೆ ಮತ್ತು ದಬ್ಬಾಳಿಕೆಗೆ ತಳ್ಳಿದೆ. ಶೋಷಣೆಗೆ ಸಿಕ್ಕ ಅಸಂಖ್ಯಾತ ಜನ ಅಮಾನವೀಯ ಶೋಷಣೆಗೆ, ಪಾಶವೀ ತುಳಿತಕ್ಕೆ ಒಳಗಾದರೆ, ಶೋಷಣೆ ಮಾಡುತ್ತಿದ್ದ ಅಲ್ಪಸಂಖ್ಯಾತರು ಮಾನವ ನಾಗರೀಕತೆಯ "ಅಪ್ರಜ್ಞಾಪೂರ್ವಕ" ಉಪಕರಣಗಳಾದರು. ಈ ಶೋಷಣೆ ಮಾಡುತ್ತಿದ್ದ ಜನಗಳು ತಮಗೆ ದೊರೆತ ವಿರಾಮವನ್ನು ಭೌತಿಕ ಮೌಲ್ಯಗಳನ್ನು ನೇರವಾಗಿ ಉತ್ಪಾದಿಸಿದ ಕಸುಬುಗಳಲ್ಲಿ ತೊಡಗಿಸಿದಾಗ ಅವೇ ಸಾಂಸ್ಕೃತಿಕ ಮೌಲ್ಯಗಳ ಸೃಷ್ಟಿಗೆ ತಳಹದಿಯಾಯಿತು. ಸಾಹಿತ್ಯ, ಕಲೆ, ತತ್ವಶಾಸ್ತ್ರ ಮುಂತಾದುವುಗಳು ನಿರಂತರವಾಗಿ ಬೆಳೆದು ವಿಜ್ಞಾನದ ವಿಕಾಸಕ್ಕೆ ದಾರಿ ಮಾಡಿ ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಯ ಆಧುನಿಕ ಯುಗದ ಕಡೆಗೆ ಸಾಗಿತು. ವರ್ಗಸಮಾಜದ ಹುಟ್ಟು ವಿಕೆಯಿಂದಾದ ಪರಿಣಾಮಗಳು ಇವು.

ಮಾನವನ ಬೆಳವಣಿಗೆಯಲ್ಲಿ ಗುಲಾಮಗಿರಿ ವಹಿಸಿದ ಪಾತ್ರವನ್ನು ಕುರಿತು ಚಾರಿತ್ರಿಕ ಭೌತವಾದದ ಸಹಲೇಖಕನಾದ ಫ್ರೆಡರಿಕ್ ಎಂಗಲ್ಸನು ಹೇಳಿರುವ ಕೆಲವು ಮಾತುಗಳನ್ನು ಉಲ್ಲೇಖಿಸುವುದು ಇಲ್ಲಿ ಉಚಿತ.

"ಗುಲಾಮಗಿರಿಯು ಹಟ್ಟಿಕೊಂಡಿದೆ. ಅದು ಕೂಡಲೇ ಹಳೆಯ ಬುಡಕಟ್ಟಿನಿಂದಾಚೆ ಬೆಳೆಯುತ್ತಿದ್ದ ಜನಗಳ ಪ್ರಮುಖ ಉತ್ಪಾದನಾ ವಿಧಾನವಾಯಿತು. ಆದರೆ ಕೊನೆಯಲ್ಲಿ ಅದು ಅವರ ನಾಶಕ್ಕೂ ಮುಖ್ಯ ಕಾರಣಗಳಲ್ಲೊಂದಾಯಿತು. ಗುಲಾಮಪದ್ಧತಿ ವ್ಯವಸಾಯ ಮತ್ತು ಕೈಗಾರಿಕೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಶ್ರಮ ವಿಭಜನೆಯನ್ನು ಮೊದಲಬಾರಿಗೆ ಉಂಟುಮಾಡಿತು. ಇದಲ್ಲದೆ, ಪ್ರಾಚೀನ ಜಗತ್ತಿನ ಪುಷ್ಪವಾದ ಗ್ರೀಕ್ ಸಂಸ್ಕೃತಿಯೂ ಹುಟ್ಟಿತು. ಗುಲಾಮ ಪದ್ಧತಿಯಿಲ್ಲದೆ ಗ್ರೀಕ್ ರಾಜ್ಯ, ಕಲೆ, ವಿಜ್ಞಾನ ಯಾವುದೂ ಇಲ್ಲ. ಗುಲಾಮ ಪದ್ಧತಿಯಿಲ್ಲದೆ ರೋಮ್ ಸಾಮ್ರಾಜ್ಯವೂ ಇಲ್ಲ. ಆದರೆ ಗ್ರೀಕ್ ಸಂಸ್ಕೃತಿ ಮತ್ತು ರೋಮ್ ಸಾಮ್ರಾಜ್ಯವಲ್ಲದೆ ಆಧುನಿಕ ಯುರೋಪ್ ಕೂಡ ಇಲ್ಲ. ನಮ್ಮ ಎಲ್ಲಾ ಆರ್ಥಿಕ ರಾಜಕೀಯ ಮತ್ತು ಭೌದ್ಧಿಕ ಬೆಳವಣಿಗೆಯ ಹಿಂದೆ ಇದ್ದಂತಹ ಸ್ಥಿತಿಯಲ್ಲಿ ಗುಲಾಮಗಿರಿ ಸಾರ್ವತ್ರಿಕವಾಗಿ ಒಪ್ಪವಾಗಿದ್ದುದಲ್ಲದೆ ಅಷ್ಟೇ ಅಗತ್ಯವೂ ಆಗಿತ್ತು ಎಂಬುದನ್ನು ಮರೆಯಬಾರದು. ಈ ಅರ್ಥದಲ್ಲಿ ನಾವು ಹೀಗೆಂದು ಹೇಳಬಹುದು. ಗುಲಾಮಗಿರಿಯ ಪ್ರಾಚೀನ ವ್ಯವಸ್ಥೆಯಿಲ್ಲದೆ ಆಧುನಿಕ ಸಮಾಜವಾದವೂ ಇಲ್ಲ.

(ಮುಂದುವರೆಯುವುದು)

ತುಟ್ಟಿಭತ್ಯವನ್ನು ಕುರಿತು

1947ರಲ್ಲಿ ಸ್ವಾತಂತ್ರ್ಯ ಬಂದ ಮೇಲೂ, ದೇಶದ ಆಳುವವರ್ಗಗಳು ಅನುಸರಿಸುವ ರಾಜಕೀಯ ಮೇಲು ವ್ಯವಸ್ಥೆ ಮತ್ತು ಸಾಮಾಜಿಕ-ಆರ್ಥಿಕ ನೀತಿಗಳಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ದೀರ್ಘ ಆಳ್ವಿಕೆಯ ಕುರುಹುಗಳೇ ಉಳಿದಿವೆ. ಕಳೆದ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರು ಆರಂಭಿಸಿದ ತುಟ್ಟಿಭತ್ಯವೆಂಬ ಮೋಸದ ಯೋಜನೆಯನ್ನು ಚರ್ಚಿಸುವುದು ಈ ಲೇಖನದ ಉದ್ದೇಶ. ಪ್ರತಿ ದಿನವೂ ಕೂಡಲೇ ಏರುತ್ತಿದ್ದ ಅಗತ್ಯವಸ್ತುಗಳ ಬೆಲೆಗಳಿಂದ ಅದರಲ್ಲೂ ಆಹಾರ ವಸ್ತುಗಳ ಏರುಬೆಲೆಯಿಂದ ನರಳುತ್ತಿರುವ "ಕಡಿಮೆ ವೇತನ"ದ ನೌಕರರ ಸಹಾಯಕ್ಕೆ ಸಾಮ್ರಾಜ್ಯಶಾಹಿ ಸರ್ಕಾರ ಮತ್ತು ಮಾಲೀಕವರ್ಗಗಳು ನಡೆಸಿದ ಪ್ರಯತ್ನವೇ ಈ ಯೋಜನೆ ಎಂಬ ಭಾವನೆಯನ್ನು ದುಡಿಯುವ ಜನತೆಯಲ್ಲಿ ತರಲು ಯತ್ನಿಸಲಾಯಿತು.

ಪ್ರತ್ಯೇಕತೆ:

ತುಟ್ಟಿಭತ್ಯವು ಹಣದ ರೂಪದಲ್ಲೇ ಇದ್ದರೂ, ಅದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಾದುಕೊಂಡಿದೆ. ದುಡಿಯುವ ಜನತೆಯ "ಪೂರ್ಣವೇತನ"ದ ಬಹುಮುಖ್ಯ ಭಾಗವೆಂದು ಅದನ್ನು ಗಣಿಸಲಾಗಿದೆ. ಜೀವನವೆಚ್ಚವು ಬೇಗ ಬೇಗ ಏರುತ್ತಿರುವುದರಿಂದ ಈ ತುಟ್ಟಿಭತ್ಯವನ್ನು ಪದೇಪದೇ ಪರಿಷ್ಕರಿಸಬೇಕಾಗಿರುವುದರಿಂದ ಈ ಪ್ರಶ್ನೆಗೆ ಹೆಚ್ಚು ಗಮನ ನೀಡಲಾಗಿದೆ. ಈದಿನ ತುಟ್ಟಿಭತ್ಯದ ಉದ್ದೇಶಕ್ಕೇ ಪ್ರಹಾರ ಒದಗುತ್ತಿದೆ. ಅದು ಒಟ್ಟಾರೆ ಪ್ರಮಾಣದಲ್ಲಿ ಏರುತ್ತಿದ್ದರೂ, ಬೆಲೆಏರಿಕೆಯ ಜೊತೆ ಅದಕ್ಕೆ ಸ್ಪರ್ಧಿಸಲಾಗುತ್ತಿಲ್ಲ. ಜೀವನವೆಚ್ಚದ ಲೆಕ್ಕಾಚಾರಗಳಲ್ಲಿ ವ್ಯತ್ಯಾಸಮಾಡುತ್ತಿದ್ದರೂ ಅದು ಸರಿಹೊಂದುತ್ತಿಲ್ಲ.

ಆದರೆ ವೇತನಗಳ ಅಥವಾ ಒಪ್ಪಿತ ಸ್ಥಿತಿಗತಿಗಳಲ್ಲಿ ತನ್ನ ದುಡಿಮೆಯನ್ನು ಮಾಲೀಕನಿಗೆ ಮಾರುವ ದುಡಿಮೆಗಾರನ ಹಣದ ಕೊಳ್ಳುವ ಶಕ್ತಿಯನ್ನು ಕಾಪಾಡುವ ಮೂಲ ಉದ್ದೇಶದಿಂದ ತುಟ್ಟಿಭತ್ಯವನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ. ದುಡಿಮೆಗಾರನು ಮಾರುವ ಅವನ ದುಡಿಮೆಶಕ್ತಿಯೂ ಒಂದು ಸರಕಾದ್ದರಿಂದ, ಸದ್ಯದ ಸ್ಥಿತಿಯಲ್ಲಿ ವೇತನ ಎಂದು ಕರೆಸಿಕೊಳ್ಳುವ ಅದರ ಬೆಲೆಯೂ ಬೇಡಿಕೆ ಮತ್ತು ಸರಬರಾಜಿನ ನಿಯಮಕ್ಕೆ ಒಳಪಟ್ಟಿರುತ್ತದೆ. ಆದರೆ ಬಿಕ್ಕಟ್ಟುಗಳು ಕಿಕ್ಕಿರಿದಿರುವ ಭಾರತದಂಥ ದೇಶದಲ್ಲಿ "ದುಡಿಮೆಯನ್ನು ಬಯಸುವ ಎತ್ತಿದ ಆಯುಧಗಳು ಹೆಚ್ಚಾಗುತ್ತವೆ ಆದರೆ ಆಯುಧಗಳು ದಿನದಿನ ತೆಳ್ಳಗಾಗುತ್ತವೆ." ಆದ್ದರಿಂದ "ಕನಿಷ್ಠ ವೇತನ"ಕ್ಕಿಂತ ವೇತನಗಳು ತುಂಬ ಕಡಿಮೆಯಾಗಿರುವುದು ಸಹಜವೇ ಆಗುತ್ತದೆ.

ಈ ಸಂದರ್ಭದಲ್ಲಿ 1957ರಲ್ಲಿ ನಡೆದ ಹದಿನೈದನೇ ಭಾರತೀಯ ಲೇಬರ್ ತ್ರಿಪಕ್ಷೀಯ ಸಮಾವೇಶವನ್ನು ಉಲ್ಲೇಖಿಸಬಹುದು. ಇಲ್ಲಿ ವೇತನಗಳ ನಿರ್ಧಾರದ ಸಮಗ್ರ ವಿವರಗಳನ್ನು ಪರಿಶೀಲಿಸಲಾಗಿತ್ತು. "ಅಗತ್ಯ ಆಧಾರಿತ ಕನಿಷ್ಠ ವೇತನ" ನಿರ್ಧಾರದ ತಳಹದಿಯನ್ನು ಅಂತಿಮವಾಗಿ ಈ ಸಮಾವೇಶ ನಿರ್ಧರಿಸಿತ್ತು. ಅಂದಿನಿಂದ, ಕೇಂದ್ರಸರ್ಕಾರದ ನೌಕರರೂ ಸೇರಿದಂತೆ ಎಲ್ಲ ದುಡಿಯುವ ಜನರೂ ಹದಿನೈದನೇ ಭಾರತೀಯ ಲೇಬರ್ ಸಮಾವೇಶದ ತೀರ್ಮಾನಗಳ ಪ್ರಕಾರ ವೇತನಗಳನ್ನು ಪುನರ್‌ನಿಗದಿಮಾಡಬೇಕೆಂದು ಬೇಡಿಕೆ ಸಲ್ಲಿಸುತ್ತಿದ್ದಾರೆ. ಆದರೆ ಆ ತೀರ್ಮಾನಗಳು ಶಿಫಾರಸು ರೂಪದಲ್ಲಿ ಮಾತ್ರ ಇವೆಯೆಂದು ಉತ್ತರ ಹೇಳಲಾಗಿದೆ:

ಬೇಡಿಕೆ ಮತ್ತು ಸರಬರಾಜು ನಿಯಮದ ಆಧಾರದ ಮೇಲೆ ವೇತನಗಳನ್ನು ನಿಗದಿಪಡಿಸುವುದಾದರೆ ನಮ್ಮ ಗಮನಕ್ಕೆ ಇಲ್ಲಿ ಬರುವ ಅಂಶವೆಂದರೆ ಬೇಡಿಕೆ ಮತ್ತು ಸರಬರಾಜು ನಿಯಮದ ಆಧಾರದ ಮೇಲೆ ಮೊದಲು ನಿಗದಿಪಡಿಸಿದ ಕನಿಷ್ಠ ವೇತನವು, ಹಣದ ಕೊಳ್ಳುವಶಕ್ತಿಯ ಇಳಿಮುಖದಿಂದ ನಿರಂತರವಾಗಿ ಪೆಟ್ಟು ತಿಂದದ್ದು.

ತುಟ್ಟಿಭತ್ಯದ ಪ್ರಶ್ನೆಯಿಂದ ದುಡಿಯುವವರ್ಗದ ಗಮನವನ್ನು ಬೇರೆ ಕಡೆಗೆ ಹರಿಸಲು ಸರ್ಕಾರ ಮತ್ತು ಮಾಲೀಕರು ಬಹಳಕಾಲದಿಂದ ಪ್ರಯತ್ನಿಸಿದ್ದಾರೆ. ಇದರಿಂದ ತುಟ್ಟಿಭತ್ಯದ ಬಗ್ಗೆ ಒಂದು ರೀತಿಯ ಭಾವನಾತ್ಮಕ ಸಂಬಂಧ ಬೆಳೆದಿದೆ. ಹೀಗೆ ಮಾಡುವಾಗ ಅವರು "ವೇತನಗಳು ಗ್ರಾಹಕ ಸರಕುಗಳ ವಿತರಣೆಯೇ" ಎಂಬುದನ್ನು ಮರೆತುಬಿಡುತ್ತಾರೆ. ದೇಶದ ರಾಜಕೀಯ ಆರ್ಥಿಕತೆಯು ತರುವ ವಿರೋಧಾಭಾಸಗಳನ್ನೂ ಅದು ಒಳಗೊಳ್ಳುತ್ತದೆ ಎಂಬ ಅಂಶವನ್ನೂ ಮರೆಯುತ್ತಾರೆ.

ಹುಟ್ಟು ಮತ್ತು ವಿಕಾಸ:

ಸದ್ಯದಲ್ಲಿ ಆಕಾರ ಮತ್ತು ತಿರುಳು ಎರಡು ವಿಧದಲ್ಲೂ ಹಲ್ಲೆಗೆ ಒಳಗಾಗಿರುವ ತುಟ್ಟಿಭತ್ಯದ ಬಗ್ಗೆ ಇನ್ನಷ್ಟು ಹೇಳುವುದಕ್ಕೆ ಮೊದಲು, ಅದರಬೆಳವಣಿಗೆಯ ಬಗ್ಗೆ ಮಾಡಿರುವ ಕೆಲವು ಸೂಚನೆಗಳನ್ನು ಇಲ್ಲಿ ಹೇಳಬಹುದು.

"ಬೇರೆ ಯಾವುದೇ ದೇಶದಲ್ಲಿ (ಬಹುಶಃ ಪಾಕಿಸ್ತಾನದಲ್ಲಿ ಬಿಟ್ಟರೆ) ತುಟ್ಟಿಭತ್ಯವನ್ನು ವೇತನಗಳ ಜೊತೆಗೆ ಸರ್ಕಾರ ಮತ್ತು ಇತರ ಉದ್ಯಮಗಳು ನೀಡುವುದರ ಬಗ್ಗೆ ನಮಗೆ ತಿಳಿದಿಲ್ಲ. ಜೀವನವೆಚ್ಚದಲ್ಲಿ ಬದಲಾವಣೆ ಆದ ಹಾಗೆ ವೇತನಗಳನ್ನು ಸರಿಹೊಂದಿಸುವುದನ್ನು ಇತರ ದೇಶಗಳ ಸರ್ಕಾರಗಳೂ ಮಾಡುತ್ತವೆ. ಆದರೆ ಆ ಬದಲಾವಣೆಗಳು ವೇತನಗಳಲ್ಲೇ ನಡೆಯುತ್ತವೆ. ವೇತನದ ಹೆಚ್ಚಳವನ್ನು ಪ್ರತ್ಯೇಕವಾಗಿ ವಿಭಜಿಸಿ ಅದೇ ಬೇರೆ ರೀತಿಯ ಸಂಭಾವನೆ ಎಂದು ಎಲ್ಲೂ ಪರಿಗಣಿಸುವುದಿಲ್ಲ..." (ಕೇಂದ್ರ ಸರ್ಕಾರ ನೌಕರರ ಸಂಭಾವನೆ ಮತ್ತು ಸೇವಾ ಪರಿಸ್ಥಿತಿಗಳ ಬಗ್ಗೆ ವಿಚಾರಣಾ ಸಮಿತಿ, ಪು 88 ಪ್ಯಾ 3)

1946ರಲ್ಲಿ ಸರ್ ಶ್ರೀನಿವಾಸ ವರದಾಚಾರಿಯರ್ ಅಧ್ಯಕ್ಷತೆಯ ಮೊಟ್ಟ ಮೊದಲ ವೇತನ ಆಯೋಗದ ವರದಿಯಲ್ಲಿ ತುಟ್ಟಿಭತ್ಯದ ಬೆಳವಣಿಗೆ ಬಗ್ಗೆ ಈ ಮಾತುಗಳು ಇವೆ:

ಯುದ್ಧಕಾಲದ ಕ್ರಮಗಳು:

(1931–34ರ) ಹೊಸ ವೇತನಗಳನ್ನು ನೌಕರರು ಅರೆಮನಸ್ಸಿನಿಂದ ಒಪ್ಪಿಕೊಂಡಿದ್ದರು. ಯುದ್ಧವು ನಿರ್ಮಿಸಿದ ಪರಿಸ್ಥಿತಿಯನ್ನು ನಿರ್ವಹಿಸಲು ಆ ವೇತನ ಸಾಲದಾಯಿತು. ಬೆಲೆಗಳ ಏರಿಕೆಯಿಂದ ಉಂಟಾದ ಬವಣೆಗಳಿಂದ ನೌಕರರನ್ನು ರಕ್ಷಿಸಲು ಭಾರತಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕಾಯಿತು. 1940ರಲ್ಲಿ ಧಾನ್ಯ ಪರಿಹಾರ ಭತ್ಯದ ಯೋಜನೆಯನ್ನು ಸರ್ಕಾರ ತನ್ನ ಅತಿ ಕನಿಷ್ಠ ವೇತನದ ಉದ್ಯೋಗಿಗಳಿಗೆ ಜಾರಿಮಾಡಿತು. ಬೆಲೆಗಳು ನಿರಂತರವಾಗಿ ಏರುತ್ತಿದ್ದು, ಈ ಯೋಜನೆ ಸರಿಯಾದ ಪರಿಣಾಮ ಬೀರಲಿಲ್ಲ. ಆದ್ದರಿಂದ 1942ರ ಆಗಸ್ಟ್‌ನಲ್ಲಿ ಭಾರತಸರ್ಕಾರ ತುಟ್ಟಿಭತ್ಯ ಯೋಜನೆಯನ್ನು ರೂಪಿಸಿತು. ಇದರ ಸವಲತ್ತು ಹೆಚ್ಚು ವೇತನದ ಸರ್ಕಾರಿ ನೌಕರರಿಗೂ ಅನ್ವಯವಾಯಿತು.

ಶಾಂತಿ ಭಟ್ಟಾಚಾರ್ಜಿ

ಭಾರತ ಮತ್ತು ಪಾಕಿಸ್ತಾನಗಳಲ್ಲಿ ಮಾತ್ರ ಯುದ್ಧ ಮುಗಿದ ಹಲವು ದಶಕಗಳ ನಂತರವೂ ತುಟ್ಟಿಭತ್ಯವು ಮುಂದುವರೆದಿದ್ದು, ಸಂಭಾವನೆಯ ಪ್ರತ್ಯೇಕಭಾಗವೆಂದು ಪರಿಗಣಿತವಾಗುತ್ತಿದೆ. ತುಟ್ಟಿಭತ್ಯ ಮೂಲತಃ ಧಾನ್ಯ ಪರಿಹಾರ ಭತ್ಯದಿಂದ ಹುಟ್ಟಿದ್ದು, ಹೆಚ್ಚು ಪರಿಹಾರ ಪಡೆದ ಕೆಲಸಗಾರರಲ್ಲಿ ಅದು ಈಗ ಹಲ್ಲೆಗೊಳಗಾಗಿದೆ. ಭಾರತೀಯ ರೈಲ್ವೆಯ ಕೆಲಸಗಾರರಿಗೆ ಅಗತ್ಯ ವಸ್ತುಗಳನ್ನು ನಿಯಂತ್ರಿತ ದರಗಳಲ್ಲಿ ಒದಗಿಸಲಾಗುತ್ತಿತ್ತು. "ನಿಜ ವೇತನ"ವನ್ನು ರಕ್ಷಿಸುವ ಈ ಕ್ರಮವನ್ನು ತೆಗೆದು ಹಣರೂಪದಲ್ಲಿ ತುಟ್ಟಿಭತ್ಯ ನೀಡಲಾಯಿತು. ಬೆಲೆ ಏರಿಕೆಗೆ ತಕ್ಕಂತೆ ತುಟ್ಟಿಭತ್ಯವನ್ನು ಏರಿಸುತ್ತಾ ಬಂದಹಾಗೆ ಅದು ತನ್ನ ಪರಿಹಾರ ಎಂಬ ಗುಣವನ್ನು ಕಳೆದುಕೊಂಡಿತು. ಮೊದಲು ಸಬ್ಸಿಡಿಯ ಹಾಗೆ ಇದ್ದದ್ದು ಈಗ ಸಂಭಾವನೆಯ ಭಾಗವಾಗಿದ್ದು ವೇತನಕರ, ಉದ್ಯೋಗಕರ ಇವುಗಳಿಗೆ ಪಕ್ಕಾಗುತ್ತಿದೆ.

ಹೀಗೆ ತುಟ್ಟಿಭತ್ಯವು ಭಾರತೀಯ ನೌಕರರ ವೇತನಗಳ ಶಾಶ್ವತ ಅಂಗವಾಗಿದೆ. ಬ್ಯಾಂಕ್ ಉದ್ಯೋಗಿಗಳಿಗೆ ನಿಗದಿಪಡಿಸಿದ ತುಟ್ಟಿಭತ್ಯ ದರವನ್ನು ಬದಲಾಯಿಸಲು ಕೆ.ಸಿ ಸೇನ್ ಅಧ್ಯಕ್ಷತೆಯಲ್ಲಿ ಅಖಿಲಭಾರತ ಕೈಗಾರಿಕಾ ಮಂಡಲಿ (ಬ್ಯಾಂಕ್) ವಿವಾದಗಳ ನಿಯಮದ ಅನ್ವಯಕ್ಕಾಗಿ ವರದಿ ತಯಾರಿಸಲ್ಪಟ್ಟಿತು. ಈ ವರದಿಯು ತುಟ್ಟಿಭತ್ಯವನ್ನು ಪ್ರಾದೇಶಿಕ ಜೀವನ ವೆಚ್ಚ ಸೂಚಿಯ ಅಂಕಿಅಂಶಗಳಿಗೆ ಹೊಂದಿಸಬೇಕೆಂದು ಸಲಹೆ ಮಾಡಿತು. ಎ ಐ ಬಿ.ಇ.ಎ. ನೇತೃತ್ವದಲ್ಲಿ ಅನೇಕ ಹೋರಾಟಗಳನ್ನು ನಡೆಸಿದ ಬ್ಯಾಂಕ್ ಉದ್ಯೋಗಿಗಳು, ಅದೇ ಸಂಘದ ನೇತೃತ್ವದಲ್ಲಿ ತುಟ್ಟಿಭತ್ಯದ ಸ್ಥಗಿತ ಸೂತ್ರವನ್ನು ಒಪ್ಪಿಕೊಂಡಿರುವುದು ಆಶ್ಚರ್ಯಕರವಾಗಿದೆ. ಇದರಿಂದ ಇಡೀ ದುಡಿಯುವ ವರ್ಗಕ್ಕೆ ಹಾನಿಯಾಗಿದೆ.

ಸಂಘಟಿತ ಕಾರ್ಮಿಕರು ಅನೇಕ ಹೋರಾಟಗಳನ್ನು ನಡೆಸಿದ್ದರೂ, ಹೊಸ ಸಾಮಾಜಿಕ ಅಗತ್ಯಗಳಿಗೆ ಅನುಗುಣವಾದ ವೇತನ ಹೆಚ್ಚಳ ಮತ್ತು ರಕ್ಷಣಾ ತುಟ್ಟಿಭತ್ಯವನ್ನು ಪಡೆಯಲು ಸಾಧ್ಯವಾಗಿಲ್ಲ. ಇದರಿಂದ ವಿವಿಧ ವರ್ಗದ ಕಾರ್ಮಿಕರಿಗೆ ವಿವಿಧ ರೀತಿಯ ತುಟ್ಟಿಭತ್ಯ ನೀಡಲಾಗುತ್ತಿದೆ. ವೇತನಗಳ ಬಗ್ಗೆ ಭಾರತೀಯ ದುಡಿಯುವ ಜನತೆಗೆ ಸೈದ್ಧಾಂತಿಕ ಪ್ರಜ್ಞೆ ಇಲ್ಲದಿರುವುದರಿಂದ ಸರ್ಕಾರ ಮತ್ತು ಆಳುವ ವರ್ಗಗಳು, ಬ್ಯಾಂಕ್, ಎಲ್.ಐ.ಸಿ. ನೌಕರರು ಇತರ ನೌಕರರಿಗಿಂತ ಹೆಚ್ಚು ತುಟ್ಟಿಭತ್ಯ ಪಡೆಯುತ್ತಿದ್ದಾರೆ ಎಂಬ ಪ್ರಚಾರ ನಡೆಸಿ ತಪ್ಪು ಅಭಿಪ್ರಾಯ ಉಂಟುಮಾಡುವುದು ಸಾಧ್ಯವಾಗಿದೆ.

ವರ್ಷಕ್ಕೆ ಶೇ. 20ರ ಹಾಗೆ ಬೆಲೆ ಏರುತ್ತಿದ್ದರೂ ಭಾರತೀಯ ದುಡಿಯುವ ಜನತೆಗೆ ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ ವೇತನ ಹೆಚ್ಚಿಲ್ಲ. ಆದರೆ ಬಿರ್ಲಾ ಟಾಟಾಗಳ ಆಸ್ತಿ ಕೋಟಿಗಟ್ಟಲೆ ಹೆಚ್ಚಾಗಿದೆ. ಈಗ ಕೇಂದ್ರದಲ್ಲಿ ಹಳೇ ನೀತಿಗಳನ್ನೇ ಅನುಸರಿಸುವ ಸರ್ಕಾರ ಬಂದಿದೆ. ಇದರಿಂದ ಆರ್ಥಿಕ ಸುಧಾರಣೆ ಏನೂ ಸಾಧ್ಯವಿಲ್ಲ ಎಂಬುದು ದುಡಿಯುವ ಜನತೆಗೆ ಗೊತ್ತಿದೆ. ದುಡಿಯುವ ಜನತೆಯ ಜೀವನ ಮತ್ತು ಜೀವಿತದ ಮೇಲೆ ಪ್ರಹಾರಗಳು ಹೆಚ್ಚಲಿವೆ. ಆದ್ದರಿಂದ ವಿಶಾಲ ತಳಹದಿಯ ಐಕ್ಯಚಳುವಳಿಯನ್ನು ಕಟ್ಟುವುದು ಅವರ ಮೊದಲ ಕರ್ತವ್ಯವಾಗಿದೆ.

●

ಲೋಕೋಪಯೋಗಿ ಇಲಾಖೆ ದಿನಗೂಲಿಗಳ ಫೆಡರೇಷನ್ ಸಭೆ

ಕರ್ನಾಟಕ ರಾಜ್ಯ ಪಿ. ಡಬ್ಲ್ಯು. ಡಿ. ದಿನಗೂಲಿಗಳ ಫೆಡರೇಷನ್‌ನ ರಾಯಚೂರು ಜಿಲ್ಲಾ ಮಟ್ಟದ ಕಾರ್ಯಕಾರಿ ಮಂಡಳಿಯು ಜಿಲ್ಲಾ ಅಧ್ಯಕ್ಷರಾದ ಎಚ್. ಗೋವಿಂದರೆಡ್ಡಿ ಗಿರಿದಾಸ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 28-5-80ರಂದು ಸಾಯಂಕಾಲ 6 ಗಂಟೆಗೆ ಸಭೆಸೇರಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು.

ಸಭೆಯ ಚರ್ಚೆಯಲ್ಲಿ ಎಲ್ಲಾ ತಾಲ್ಲೂಕು ಸಂಚಾಲಕರು, ಜಿಲ್ಲಾ ಕಾರ್ಯಕಾರಿ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

ನಿರ್ಣಯಗಳು:

1. ರಾಜ್ಯಾದ್ಯಂತ ಲೋಕೋಪಯೋಗಿ ಇಲಾಖೆಯಲ್ಲಿ ಒಂದು ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿರುವ ಪ್ರತಿಯೊಬ್ಬ ದಿನಗೂಲಿಯ ನೌಕರಿಯನ್ನು ಖಾಯಂಗೊಳಿಸಬೇಕು. ಮತ್ತು ಇತರ ಸರಕಾರಿ ನೌಕರರಿಗೆ ಸಿಗುತ್ತಿರುವ ಎಲ್ಲಾ ತರಹದ ಸೌಲಭ್ಯಗಳನ್ನು ಇವರಿಗೂ ಒದಗಿಸಬೇಕೆಂದು ಸರಕಾರದ ಮೇಲೆ ಒತ್ತಾಯತರಲು ದಿನಾಂಕ 10-6-80ರಿಂದ 15-6-80 ರವರೆಗೆ ಕಪ್ಪು ಬ್ಯಾಡ್ಜ್ ಧರಿಸಿ ಬೇಡಿಕೆ ದಿನಾಚರಣೆಯನ್ನು ಆಚರಿಸಬೇಕು.

2. ನಂತರ 15-6-80ರಂದು ಮೆರವಣಿಗೆ ಮೂಲಕ ಹೊರಟು ರಾಯಚೂರಿಗೆ ಬರಲಿರುವ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಬೇಕು, ಮತ್ತು ನಮ್ಮ ಕುಂದುಕೊರತೆಗಳನ್ನು ವಿವರಿಸುವ ಕರಪತ್ರ ಮುದ್ರಿಸಿ ಸಾರ್ವಜನಿಕರಲ್ಲಿ ಹಂಚುತ್ತ ಪ್ರಚಾರ ಕೈಗೊಳ್ಳಬೇಕು.

3. ಸಿ. ಐ. ಟಿ. ಯು.ನ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ರವರನ್ನು ಬೆಂಗಳೂರಿನಿಂದ ಗಡೀಪಾರು ಮಾಡಬೇಕೆನ್ನುವ ಸರಕಾರದ ಕಾರ್ಮಿಕ ದಮನಕಾರಿ ನೀತಿಯನ್ನು ಖಂಡಿಸಿತು.

4. ಸರಕಾರ ಕಾರ್ಮಿಕರ ಹಕ್ಕನ್ನು ಕಸಿದುಕೊಳ್ಳುವ ದುರಾಲೋಚನೆಯಿಂದ ತರಬೇಕೆಂದಿರುವ ಅಗತ್ಯ ಸೇವಾ ಕಾಯಿದೆಯನ್ನು ವಿರೋಧಿಸಿ ಜಾರಿಯಾಗದಂತೆ ಪ್ರತಿಭಟಿಸಬೇಕು.

5. ಜನಸಾಮಾನ್ಯರ ದಿನಬಳಕೆ ವಸ್ತುಗಳ ಬೆಲೆಯನ್ನು ಹತೋಟಿಗೆ ತರಲು ವಿಫಲವಾದ ಸರಕಾರದ ನೀತಿಯನ್ನು ಖಂಡಿಸಿತು.

●

ಅಗತ್ಯ ಸೇವಾ ಮಸೂದೆ ವಿರೋಧಿಸಿ ಸಮ್ಮೇಳನ

ಕೆಲವು ಕೈಗಾರಿಕಾ ಕ್ಷೇತ್ರಗಳನ್ನು ಅಗತ್ಯ ಸೇವೆಗೆ ಸೇರಿಸಿ ಅವುಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಮಸೂದೆಯನ್ನು ತರಬಯಸಿರುವ ಕರ್ನಾಟಕ ಸರ್ಕಾರದ ಕ್ರಮಗಳನ್ನು ವಿರೋಧಿಸಲು ಜೂನ್ ಒಂದನೇ ತಾರೀಕು ಬೆಂಗಳೂರಿನಲ್ಲಿ ಎಲ್ಲ ಕಾರ್ಮಿಕ ಮುಖಂಡರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಕರಾಳಶಾಸನದ ವಿರುದ್ಧ ಏರ್ಪಡಿಸಿದ್ದ ಈ ಸಮ್ಮೇಳನದಲ್ಲಿ ಎಲ್ಲ ಕೇಂದ್ರ ಸಂಘಟನೆಗಳೂ ಸೇರಿದಂತೆ ಅನೇಕ ಸ್ವತಂತ್ರ ಸಂಘಗಳ ಕಾರ್ಮಿಕರೂ ಭಾಗವಹಿಸಿದ್ದರು. ವಿವಿಧ ಕಾರ್ಮಿಕ ಸಂಘಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚಿತ್ತು.

ಸಮ್ಮೇಳನದಲ್ಲಿ ಸಿ. ಐ. ಟಿ. ಯು.ನ ಕಾಂ. ಎಸ್. ಸೂರ್ಯನಾರಾಯಣ ರಾವ್, ಎ. ಐ. ಟಿ. ಯು. ಸಿ. ನ ಕಾಂ, ಮುನಿರತ್ನಂ, ಬಿ. ಎಂ. ಎಸ್.ನ ಕಾಂ. ಶ್ವೇತಾದ್ರಿ, ಐ. ಎನ್. ಟಿ. ಯು. ಸಿ. ನ ಕಾಂ. ಮಾಧವನ್, ಹೆಚ್. ಎಂ. ಎಸ್. ನ ಕಾಂ. ಡಿ. ರಾಜಗೋಪಾಲ್ ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾರ್ಮಿಕ ಮುಖಂಡರಾದ ಎಸ್. ವೆಂಕಟರಾಂ, ಮೈಕೇಲ್ ಫರ್ನಾಂಡಿಸ್, ಎಂ. ಎಸ್. ಕೃಷ್ಣನ್, ಎನ್. ಎಲ್. ಉಪಾಧ್ಯಾಯ ಅವರೆಲ್ಲರೂ ಅಗತ್ಯ ಸೇವೆಯ ಹೆಸರಿನಲ್ಲಿ ಕೈಗಾರಿಕೆಗಳಲ್ಲಿ ಮುಷ್ಕರ ನಿಷೇಧಿಸುತ್ತಿರುವ ಮಸೂದೆಯನ್ನು ಉಗ್ರವಾಗಿ ವಿರೋಧಿಸಿದರು.

ಸರ್ಕಾರವು ಅಗತ್ಯ ಸೇವಾ ಮಸೂದೆಯನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕು, ಕೈಗಾರಿಕಾ ವಿವಾದದಲ್ಲಿ ಪೋಲೀಸರ ಮಧ್ಯಸ್ಥಿಕೆ ಇರಕೂಡದು, ಕರ್ನಾಟಕ ಪೋಲೀಸ್ ಕಾಯಿದೆಯ 55ರಿಂದ 58ರ ವಿಧಿಗಳನ್ನು ತೆಗೆದು ಹಾಕಬೇಕು, ವಿದ್ಯುತ್ ಕಡಿತದಿಂದ ಲೇ ಆಫ್ ಆದ ಕಾರ್ಖಾನೆ ಕಾರ್ಮಿಕರಿಗೆ ಪೂರ್ಣ ಸಂಬಳ ಕೊಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮುಂದಿನ ಕಾರ್ಯಕ್ರಮವನ್ನು ರೂಪಿಸಲು 50 ಮಂದಿಯ ಕ್ರಿಯಾಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಸಿ. ಐ. ಟಿ. ಯು.ವಿನ ಎಸ್. ಸೂರ್ಯನಾರಾಯಣ ರಾವ್, ಎನ್. ಎಲ್. ಉಪಾಧ್ಯಾಯ, ಟಿ. ಎಸ್. ಅನಂತರಾವ್, ಆರ್. ಶ್ರೀನಿವಾಸ್, ಜಿ. ರಾಮು, ಇವರು ಇದ್ದಾರೆ.

ಈ ಸಂಬಂಧದಲ್ಲಿ ದಿನಾಂಕ 9-6-80ರಂದು ಮಧ್ಯಾಹ್ನ ಒಂದು ಗಂಟೆಗೆ ಕಾರ್ಮಿಕರ ಮೆರವಣಿಗೆಯು ಚಿಕ್ಕಲಾಲ್‌ಬಾಗ್‌ನಿಂದ ಹೊರಟು ವಿಧಾನಸೌಧದ ಮುಂದೆ ಧರಣಿ ಕೂರಲಿದೆ. ಸಂಜೆ ಬಹಿರಂಗಸಭೆ ಇದೆ. ಕಾಂಗ್ರೆ ಸರಕಾರದ ಕಾರ್ಮಿಕ ವಿರೋಧಿ, ಸರ್ವಾಧಿಕಾರಿ ಕ್ರಮಗಳನ್ನು ಎದುರಿಸುವತ್ತ ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದುಸೇರಿ ಹೋರಾಡಲು ಮುಂದಾಗಿರುವುದು ರಾಜ್ಯದಾದ್ಯಂತ ಐಕ್ಯಹೋರಾಟಕ್ಕೆ ನಾಂದಿಯಾಗಲಿದೆ.

ಭದ್ರಾವತಿ ತಾಲ್ಲೂಕು ಸಮಿತಿ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಭದ್ರಾವತಿ ತಾಲ್ಲೂಕು ಸಮಿತಿಯ ಸದಸ್ಯರು 25ನೇ ಮೇ ತಿಂಗಳಂದು ಸಭೆಸೇರಿ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದ್ದಾರೆ.

ತೀರ್ಥಹಳ್ಳಿ ಸೇತುವೆ ಬಳಿ ಅಪಘಾತಕ್ಕೀಡಾಗಿ ಮರಣಹೊಂದಿದ ಕಾರ್ಮಿಕರಿಗೆ ಮತ್ತು ಪ್ರಯಾಣಿಕರಿಗೆ ಸರ್ಕಾರ ಕೂಡಲೇ ರೂ. 5000 ಪರಿಹಾರ ನೀಡಬೇಕು. ಕರ್ನಾಟಕ ರಾಜ್ಯದ ಕಾರ್ಮಿಕ ಸಚಿವರ ಸೋದರ ಕೊಲೆಯಲ್ಲಿ ಭಾಗವಹಿಸಿರುವುದರಿಂದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲು ಇಬ್ರಾಹಿಂ ಕೂಡಲೇ ರಾಜೀನಾಮೆ ನೀಡಬೇಕು.

ಕಾರ್ಮಿಕ ಸಂಘಟನೆಗಳು ಬಲಗೊಳ್ಳುತ್ತಿರುವಾಗ ಗುತ್ತೇದಾರಿ ಬಂಡವಾಳಶಾಹಿಗಳು ಅದನ್ನು ಮುರಿಯಲು ಪ್ರಯತ್ನಿಸುತ್ತಿರುವುದನ್ನು ಸಭೆ ಖಂಡಿಸಿತು. ಕಾಂ. ಎಸ್. ಸೂರ್ಯನಾರಾಯಣರಾವ್ ಮತ್ತು ಇತರ ಕಾರ್ಮಿಕರ ಗಡೀಪಾರು ಆಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರವನ್ನು ಸಭೆ ಒತ್ತಾಯಪಡಿಸಿತು.

○

ಹೋಟೆಲ್ ಕಾರ್ಮಿಕರ ಹೋರಾಟ

ಬೆಂಗಳೂರು ನಗರದ ಅಲಸೂರಿನ ಲಿಡೋ ಹೋಟೆಲಿನ ಮಾಲೀಕರು 21-5-80ರಿಂದ ಹೋಟೆಲಿಗೆ ಬೀಗಮುದ್ರೆಹಾಕಿ ಕಾರ್ಮಿಕರನ್ನು ಉಪವಾಸ ಹಾಕಿದ್ದಾರೆ. ಕಳೆದ ತಿಂಗಳು ಐವರು ಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಗಿತ್ತು. ಅವರ ಮೇಲೆ ಪೋಲೀಸರಿಗೆ ದೂರನ್ನೂ ಕೊಟ್ಟಿದ್ದಾರೆ.

ಬೆಂಗಳೂರಿನ ಮಾಂಸಾಹಾರಿ ಹೋಟೆಲ್ ಆದ ಗ್ರ್ಯಾಂಡ್ ನ್ಯಾಷನಲ್ ಹೋಟೆಲಿನ ಮಾಲೀಕ ಕೆ. ವಿ. ಅಬ್ದುಲ್ಲ ಅವರು ತಮ್ಮ ಹೋಟೆಲನ್ನು ಸಹ ಬೀಗಮುದ್ರೆ ಮಾಡಿದ್ದಾರೆ. ಹತ್ತಾರು ಕಾರ್ಮಿಕರನ್ನು ವಜಾಮಾಡಿದ್ದಾರೆ. ಒಲಂಪಸ್ ಹೋಟೆಲ್ ಸಹ ಇದೇ ರೀತಿ ಆಗಿದೆ ಪೋಲೀಸ್ ಮತ್ತು ಕಾರ್ಮಿಕ ಇಲಾಖೆಗಳು ನೌಕರರ ಕಷ್ಟಕ್ಕೆ ಬೆಲೆಕೊಡುತ್ತಿಲ್ಲ. ಆದ್ದರಿಂದ ಮಾಲೀಕರ ಮನೆಯ ಮುಂದೆ ಕಾರ್ಮಿಕರು ಧರಣಿ ಹೂಡಲು ನಿರ್ಧರಿಸಿದ್ದಾರೆ ಈ ದಿಸೆಯಲ್ಲಿ ಕಾರ್ಯಕ್ರಮ ರೂಪಿಸಲು 10-6-80ರಂದು ರಾತ್ರಿ ಒಂಬತ್ತುಗಂಟೆಗೆ ದೇವಾಂಗ ಸಂಘದಲ್ಲಿ ಸಭೆ ಕರೆಯಲಾಗಿದೆ.

ಈ ಹೋರಾಟಕ್ಕೆ ಎಲ್ಲ ಸಂಘಟನೆಗಳ, ಸಾರ್ವಜನಿಕರ ಸಹಕಾರ ಕೋರಲಾಗಿದೆ.

○

ನಿಧನಕ್ಕೆ ಸಂತಾಪ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ ಹಲವು ವರ್ಷಗಳಿಂದ ಸದಸ್ಯರಾಗಿದ್ದ ಕಾಂ. ಪಿ. ನಾಗಪ್ಪನವರು ತಾ. 5-6-80ರಂದು ನಿಧನರಾದರು. ಸಿ. ಪಿ. ಐ. (ಎಂ) ಭದ್ರಾವತಿ ಸಮಿತಿಯು ಕಾಂ. ಮಹಮ್ಮದ್ ರಾಫೀಯರ ಅಧ್ಯಕ್ಷತೆಯಲ್ಲಿ 8-6-80ರಂದು ಸಭೆಸೇರಿ ದಿವಂಗತ ಕಾಂ. ನಾಗಪ್ಪನವರ ಕುಟುಂಬಕ್ಕೆ ಸಂತಾಪವನ್ನು ಸೂಚಿಸಿದೆ.

ಕುಣಿಗಲ್ ರಸ್ತೆ ವ್ಯಾಪಾರಿಗಳ ಹೋರಾಟ

ಕುಣಿಗಲ್‌ನಲ್ಲಿ ರಸ್ತೆಯ ಕಾಲುದಾರಿಯಲ್ಲಿ ಅನೇಕ ವರ್ಷಗಳಿಂದ ವ್ಯಾಪಾರಮಾಡಿಕೊಂಡು ಅನೇಕರು ಜೀವನ ನಡೆಸುತ್ತಿದ್ದಾರೆ. ಅವರಿಗೆ ಕುಣಿಗಲ್ ಪುರಸಭೆಯವರು ಒಂದು ಅಂಗಡಿಗೆ 15ಪೈಸೆಯಂತೆ ನಿತ್ಯದ ಸುಂಕ ವಸೂಲಿ ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಪುರಸಭೆಯವರು ಸುಂಕ ವಸೂಲಿಯನ್ನು ಕಂಟ್ರಾಕ್ಟರರಿಗೆ ಹರಾಜು ಮಾಡಿದ್ದಾರೆ. ಈ ಹರಾಜು ಪಡೆದ ಬೀಟ್‌ದಾರನು ಈಗ ಸುಂಕವನ್ನು ಪ್ರತಿದಿನ ಒಂದುರೂ.ನಂತೆ ವಸೂಲಿ ಮಾಡಲು ಪುರಸಭೆಯ ಅನುಮತಿ ಪಡೆದಿದ್ದನು. ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಈ ಸುಂಕ ಬಹಳ ಹೆಚ್ಚಾಗಿತ್ತು. ಕುಣಿಗಲ್ ತಾಲ್ಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮಿತಿಯು ಈ ವ್ಯಾಪಾರಸ್ಥರ ಗೋಳನ್ನು ಬಗೆಹರಿಸಲು ನಿರ್ಧರಿಸಿ, ಕಾಂ. ಮಹಮದ್‌ದಸ್ತಗೀರ್, ಅಂಜಪ್ಪ, ಬಿ. ಜಿ. ಗಂಗಾಧರಯ್ಯ, ಇವರ ನೇತೃತ್ವದಲ್ಲಿ ವ್ಯಾಪಾರಿಗಳ ಮೆರವಣಿಗೆ ನಡೆಸಿ, ಹಿಂದಿನಂತೆ ಒಂದು ಅಂಗಡಿಗೆ 15ಪೈಸೆಯಂತೆಯೇ ಸುಂಕ ಕೊಡುವುದಾಗಿ ಪುರಸಭೆ ಅಧ್ಯಕ್ಷರಿಗೂ, ತಹಸೀಲ್ದಾರರಿಗೂ ಒತ್ತಾಯಿಸಿತು. ಪುರಸಭೆಯವರು ಹಾಲಿ ಹರಾಜು ಕಂಟ್ರಾಕ್ಟನ್ನು ವಾಪಸ್ಸು ತೆಗೆದುಕೊಳ್ಳುವುದಾಗಿ ತಿಳಿಸಿ, ಮಾಮೂಲಿ 15ಪೈಸೆ ಸುಂಕವನ್ನೇ ಮುಂದುವರೆಸಲು ಅನುಮತಿ ನೀಡಿದೆ.

ಸಿ. ಐ. ಟಿ. ಯು. ದಶಮಾನೋತ್ಸವ

ಸಿ.ಐ.ಟಿ.ಯು. ಕರೆಯ ಮೇರೆಗೆ 30-5-80ರಂದು ರಾಜ್ಯದ ಹಲವಾರು ಕಡೆ ಮೆರವಣಿಗೆ ಸಭೆಗಳು ನಡೆದಿವೆ.

ಮೈಸೂರಿನ ಪುರಭವನ ಮೈದಾನದಲ್ಲಿ ಸಿ.ಐ.ಟಿ.ಯು. ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ಸಂಬಂಧದಲ್ಲಿ ರೇಷ್ಮೆ ಕಾರ್ಮಿಕರು ಪ್ರದರ್ಶನ ನಡೆಸಿದರು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಸಿ. ಕೆ. ಮೋಜ್, ಕೆ. ತಿಮ್ಮೇಗೌಡ, ಮೋಹನ್ ಕುಮಾರ್, ಎಂ. ಮಹದೇವು ಮತ್ತು ಸೈಯದ್ ಆಲಿ ಅವರು ಸಿ. ಐ. ಟಿ. ಯು.ನ ಧೋರಣೆ ಧ್ಯೇಯಗಳನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ ಕಾಂ. ಎನ್. ಉಗ್ರಪ್ಪನವರು ಪ. ಬಂಗಾಳ, ಕೇರಳ, ತ್ರಿಪುರಗಳ ಪ್ರಗತಿಯನ್ನು ವಿವರಿಸಿದರು. ಪ್ರಾರಂಭದಲ್ಲಿ ಪುಟ್ಟಪ್ಪ ಅವರು ಕ್ರಾಂತಿ ಗೀತೆ ಹಾಡಿದರು. ಕುಣಿಗಲ್ ತಾಲ್ಲೂಕಿನ ಸಿ ಐ ಟಿ.ಯು.ಗೆ ಸೇರಿದ ಸಂಘಗಳ ಕಾರ್ಮಿಕರು ಮೆರವಣಿಗೆ ನಡೆಸಿ, ಸಿ. ಐ. ಟಿ ಯು. ಅಧ್ಯಕ್ಷರ ಗಡೀಪಾರು ಕ್ರಮವನ್ನು ರದ್ದುಪಡಿಸುವಂತೆ ಘೋಷಣೆಗಳನ್ನು ಕೂಗಿದರು. ನಂತರದ ಬಹಿರಂಗ ಸಭೆಯಲ್ಲಿ ಕಾಂ. ಎಸ್. ಜಿ. ಯೂನೂಸ್‌ಖಾನ್, ಬಿ. ಜಿ. ಗಂಗಾಧರಯ್ಯ, ಅಂಜಪ್ಪ ಅವರು ಮಾತನಾಡಿ ಗಡೀಪಾರು ಕ್ರಮವನ್ನು ಖಂಡಿಸಿದರು. ಸರ್ಕಾರ ಗಡೀಪಾರು ಆಜ್ಞೆಯನ್ನು ರದ್ದುಮಾಡುವಂತೆ ತಹಸೀಲ್ದಾರರಿಗೆ ಮನವಿ ಸಲ್ಲಿಸಿದ ನಂತರ, ಸರ್ಕಾರಕ್ಕೆ ತಂತಿಗಳನ್ನೂ ಕಳಿಸಲಾಯಿತು. ನಂತರ ಪುರಸಭೆ ಮುಖ್ಯಾಧಿಕಾರಿಗಳನ್ನು ಭೇಟಿ ಮಾಡಿ ವಸತಿಹೀನರಿಗೆ ಸೈಟು ಹಂಚುವ ಕಾರ್ಯವನ್ನು ತ್ವರಿತಗೊಳಿಸುವಂತೆ ಒತ್ತಾಯಿಸಲಾಯಿತು.

ಶಿವಮೊಗ್ಗದಲ್ಲಿ ಹಮಾಲಿ ಕಾರ್ಮಿಕರ ಸಂಘದ ಆಶ್ರಯದಲ್ಲಿ ಕಾರ್ಮಿಕರು ಸಭೆ ಸೇರಿ ಸಿ. ಐ. ಟಿ. ಯು. ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಹಮಾಲಿ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ. ಬಿ ತಿರುಕೊಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂ ಚಂದು ಕುಟ್ಟಿ ಸಿ.ಐ.ಟಿ.ಯು. ಸಾಧನೆಗಳನ್ನು ವಿವರಿಸಿದರು. ಅಗತ್ಯ ಸೇವಾ ಮಸೂದೆ, ಕೈಗಾರಿಕಾ ವಿವಾದದಲ್ಲಿ ಪೋಲೀಸರ ಹಸ್ತಕ್ಷೇಪ, ಕಾಂ. ಸೂರಿಯವರ ಗಡೀಪಾರು ಕ್ರಮ ಇವುಗಳನ್ನು ವಿರೋಧಿಸುವ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

●

ಕುದುರೆಮುಖದಲ್ಲಿ ಸಾರ್ವಜನಿಕ ಸಭೆ

ಚಿಕ್ಕಮಗಳೂರು ಜಿಲ್ಲೆ ಕುದುರೆಮುಖದ ಎಚ್.ಎಸ್.ಸಿ.ಎಲ್. ಉದ್ಯೋಗಿಗಳ ಸಂಘದ ನೇತೃತ್ವದಲ್ಲಿ ತಾ. 18-5-80 ರಂದು ಕಾರ್ಮಿಕರ ಬೃಹತ್ ಸಭೆ ಏರ್ಪಟ್ಟಿತ್ತು. ಸಭೆ ಅಧ್ಯಕ್ಷತೆಯನ್ನು ಕಾಂ. ಮೂಸಬ್ಬ ಅವರು ವಹಿಸಿದ್ದರು. ಕಾಸರಗೋಡಿನ ಲೋಕಸಭಾ ಸದಸ್ಯರಾದ ಕಾಂ. ರಾಮಣ್ಣ ರೈ, ಮತ್ತು ಕಾಂ. ಸಿ. ನಂಜುಂಡಪ್ಪ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಂಸೆ, ಮೈಕೋ, ಐ ಟಿ. ಸಿ. ಕಾರ್ಖಾನೆಗಳ ಕಾರ್ಮಿಕರ ಹೋರಾಟಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಸಿ ಐ ಟಿ ಯುಗೆ ಸೇರಿದ ಮುಖಂಡರ ಗಡೀಪಾರನ್ನು ರದ್ದುಗೊಳಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಕಾಂ. ರಾಮಣ್ಣ ರೈ ಅವರು, ತ್ರಿಪುರ ಮತ್ತು ಪ. ಬಂಗಾಳಗಳ ವಾಮರಂಗ ಸರ್ಕಾರಗಳ ಕಾರ್ಯಗಳನ್ನು ವಿವರಿಸಿದರು. ಕುದುರೆಮುಖದ ಕಾರ್ಮಿಕರ ಬೇಡಿಕೆಗಳ ಈಡೇರುವಿಕೆಗಾಗಿ ತಾನು ಪಾರ್ಲಿಮೆಂಟಿನಲ್ಲಿ ಹೋರಾಡುವ ಭರವಸೆ ಇತ್ತರು. ನಂತರ ಕಾಂ. ಕೇಶವನ್ ಪ್ಲಾಂಟೇಷನ್ ಕೆಲಸಗಾರರ ಹೋರಾಟದ ಬಗ್ಗೆ ಮಾತನಾಡಿದರು. ಕಾಂ. ಎಸ್. ದಾಮೋದರನ್, ಕಾಂ. ಮೂಸಬ್ಬ ಅವರೂ ಸಭೆಯನ್ನುದ್ದೇಶಿಸಿ ಮಾತನಾಡಿದರು ಸಭೆಗೆ ಮೊದಲು ನೂರಾರು ಕಾರ್ಮಿಕರಿಂದ ಸೇರಿದ ಬೃಹತ್ ಮೆರವಣಿಗೆಯು ಊರನ್ನೆಲ್ಲಾ ಸುತ್ತಾಡಿ ಸಾರ್ವಜನಿಕ ಸಭೆಯ ಸ್ಥಳವನ್ನು ಸೇರಿತ್ತು.

○

ಪ್ಲೈವುಡ್ ಕಾರ್ಮಿಕರ ಸಂಪು ಮುಕ್ತಾಯ

ಕಳೆದ ನಾಲ್ಕು ತಿಂಗಳುಗಳಿಂದ ನಡೆಯುತ್ತಲಿದ್ದ ಧಾರವಾಡದ ಇಂಡಿಯನ್ ಪ್ಲೈವುಡ್ ಕಾರ್ಮಿಕರ ಹೋರಾಟವು ತಾ. 23-5-80ರಂದು ಮುಕ್ತಾಯವಾಯಿತು. ಮಾಲಕರು ಮತ್ತು ಕಾರ್ಮಿಕರ ನಡುವೆ ಆದ ಒಪ್ಪಂದದ ಪ್ರಕಾರ ರೂ. 47=00 ಮಾಸಿಕ ಹೆಚ್ಚಳ ಮತ್ತು ಎರಡುವರ್ಷದ ಎಗ್ರಿಮೆಂಟನ್ನು ಮಾಡಲಾಗಿದೆ. ಇದಲ್ಲದೆ ರೂ.120 ಉಳಿಕೆಯನ್ನೂ ಕೊಡಲಾಗುವುದು. ಉಳಿದ ಬೇಡಿಕೆಗಳ ಬಗ್ಗೆ ಪರಸ್ಪರ ಮಾತುಕತೆ ಮೂಲಕ ತೀರಿಸುವ ಒಪ್ಪಂದವಾಗಿದೆ.

●

ಅಗತ್ಯ ಸೇವಾನಿಯಮ ಮಸೂದೆಯ ವಿರುದ್ಧ ಮತಪ್ರದರ್ಶನ

ಕರ್ನಾಟಕ ರಾಜ್ಯ ಸರ್ಕಾರ ತರಲೆತ್ನಿಸುತ್ತಿರುವ ಅಗತ್ಯ ಸೇವಾನಿಯಮ ಮಸೂದೆಯನ್ನು ವಿರೋಧಿಸಿ ಚಿತ್ರದುರ್ಗ ಜಿಲ್ಲಾ ಹರಿಹರದ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ತಾ. 9-6-80ರಂದು ಸಂಜೆ 5 ರಿಂದ 6-30ರವರೆಗೆ ಸಹಸ್ರಾರು ಕಾರ್ಮಿಕರು ನಗರದಲ್ಲಿ ಘೋಷಣೆಗಳನ್ನು ಕೂಗುತ್ತಾ, ಮಸೂದೆಯ ವಿರುದ್ಧ ಮತಪ್ರದರ್ಶನ ನಡೆಸಿದರು.

ಸುಮಾರು ಎರಡು ಫರ್ಲಾಂಗ್‌ನಷ್ಟು ಉದ್ದವಿದ್ದ ಮೆರವಣಿಗೆಯಲ್ಲಿ ಕಿರ್ಲೋಸ್ಕರ್ ಕಾರ್ಮಿಕರು, ಆರ್. ಸಿ. ಸೋವಾಲ್ಕರ್, ಹರಿಹರ ಪಾಲಿಫೈಬರ್ಸ್, ಗ್ರಾಸ್‌ಲೀನ್, ಕನ್‌ಸ್ಟ್ರಕ್ಷನ್ ಸಂಘದ ಕೆಲಸಗಾರರು, ಕರೂರ್ ಸಿಮೆಂಟ್ ಕಂಪೆನಿ ಕೆಲಸಗಾರರು ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೂರಾರು ಕಾರ್ಮಿಕರು ಭಾಗವಹಿಸಿದ್ದರು. ಕೆಂಬಾವುಟಗಳನ್ನು ಹಿಡಿದು ಸಾಗಿದ ದೀರ್ಘ ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು ಸಹಾ ಭಾಗವಹಿಸಿದ್ದರು. ಮೆರವಣಿಗೆಯ ನೇತೃತ್ವವನ್ನು ಕಾಂ. ಎನ್. ಜಿ. ಪಠಾಣ್, ಜಿ. ಎಂ. ಹನುಮಂತಪ್ಪ, ಜಿ. ಬಿ. ಕರೂರ್, ನಜೀರ್‌ಖಾನ್, ಕುಟ್ಟಪ್ಪ ನಾಯರ್, ಎಂ. ಎಸ್. ಶ್ರೀನಿವಾಸ್ ಹಾಗೂ ಮದಾರ್‌ಸಾಬ್ ವಹಿಸಿದ್ದರು.

ತಹಸೀಲ್ದಾರ್‌ರವರಿಗೆ ಮನವಿ ಸಲ್ಲಿಸಿದ ನಂತರ ಸಂಜೆ ಬಹಿರಂಗ ಸಭೆ ಪ್ರಾರಂಭವಾಯಿತು. ಕಾಂ. ಜೋಷಿಯವರು ಎಲ್ಲರನ್ನೂ ಸ್ವಾಗತಿಸಿದರು. ಕಾಂ. ಎನ್. ಜಿ. ಪಠಾಣ್ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ.ಯು. ಪರವಾಗಿ ಮಾತನಾಡಿದ ಎಂ. ಇಕ್‌ಬಾಲ್ ಹುಸೇನ್ ಮಾತನಾಡುತ್ತಾ ದುಡಿಯುವ ಜನತೆಯ ಓಟನ್ನು ಪಡೆದು ಗುತ್ತೇದಾರಿಗಳಿಗೆ ಅನುಕೂಲವಾಗುವ ಈ ಮಸೂದೆ ಜಾರಿಯಾದರೆ ಕಾರ್ಮಿಕರು ಹೋರಾಟದ ಮೂಲಕ ಉತ್ತರ ನೀಡುತ್ತಾರೆ ಎಂದು ಎಚ್ಚರಿಸಿದರು.

ಎ. ಐ. ಟಿ. ಯು. ಸಿ. ಪರವಾಗಿ ಮಾತನಾಡಿದ ಕಾಂ. ಜೆ. ಎಂ. ಹನುಮಂತಪ್ಪನವರು ಮಾತನಾಡಿ ತ್ಯಾಗ, ಬಲಿದಾನಗಳಿಂದ ಗಳಿಸಿರುವ ದುಡಿಯುವ ಜನರ ಹಕ್ಕನ್ನು ಕಿತ್ತುಕೊಂಡರೆ ಕಾರ್ಮಿಕರು ಗುಂಡೂರಾಯರ ಕುರ್ಚಿಯನ್ನು ಖಾಲಿ ಮಾಡಿಸುತ್ತಾರೆ ಎಂದರು. ಜೀವವಿಮಾ ನೌಕರರ ಸಂಘದ ಶ್ರೀ ಎ. ಎಸ್. ಮೂರ್ತಿಯವರು ಮಾತನಾಡಿ ಮಸೂದೆಯ ವಿವರ ನೀಡಿದರು.

ಮುಖ್ಯ ಭಾಷಣಕಾರರಾಗಿ ಮೈಸೂರ್ ಕಿರ್ಲೋಸ್ಕರ್ ಎಲೆಕ್ಟ್ರಾನಿಕ್ಸ್ ಕಾರ್ಮಿಕ ಸಂಘದ ನಾಯಕರಾದ ಕಾಂ. ಸುಬ್ರಹ್ಮಣ್ಯಂರವರು ತಮ್ಮ ಸುದೀರ್ಘ ಭಾಷಣದಲ್ಲಿ ಕಾರ್ಮಿಕ ನಾಯಕರನ್ನು ಗಡೀಪಾರು ಮಾಡುವುದು, ಸಂಘಗಳನ್ನು ಒಡೆಯಲು ಮಾಲೀಕರು ಚಮಚಾ ಸಂಘಗಳನ್ನು ಕಟ್ಟುವುದು, ಪೋಲೀಸರ ದಬ್ಬಾಳಿಕೆಯನ್ನು ವಿವರಿಸಿದರಲ್ಲದೆ, ಎಡ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯ ಸರಕಾರಗಳಿಗೂ ಬೇರೆ ರಾಜ್ಯ ಸರಕಾರಗಳಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿದರು. ಅಗತ್ಯ ಸೇವಾನಿಯಮ ಜಾರಿಗೆ ತಂದರೆ ರಾಜ್ಯದ ಮಂತ್ರಿಗಳ ಕಾರುಗಳು ರಸ್ತೆಯಲ್ಲಿ ಹೇಗೆ ಓಡಾಡುತ್ತವೆ? ಎಂದರು. ಬ್ಯಾಂಕ್ ನೌಕರರ ಸಂಘದ ಶ್ರೀ ಸುಕುಮಾರ್ ಸಹಾ ಹಾಜರಿದ್ದರು.

ಕೊನೆಯಲ್ಲಿ ಕಾಂ. ಎಂ. ಎಸ್. ಶ್ರೀನಿವಾಸ್ ವಂದನಾರ್ಪಣೆ ಮಾಡಿದರು.

○

ಸಿರಾ ಬೀಡಿ ಕಾರ್ಮಿಕರ ಸಭೆ

ತಾ. 5-6-80ರಂದು ಸಂಜೆ 6ಕ್ಕೆ ರಾಜ್ಯ ಬೀಡಿಫೆಡರೇಷನ್ ಸಂಘಟನಾ ಕಾರ್ಯದರ್ಶಿ ಕಾಂ. ಮಹಮದ್ ದಸ್ತಗೀರ್ ಅವರ ಅಧ್ಯಕ್ಷತೆಯಲ್ಲಿ ಸಿರಾ ತಾಲ್ಲೂಕು ಬೀಡಿಕಾರ್ಮಿಕರ ಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಭೆ ಸೇರಿತು. ಕಾಂ. ಸೂರ್ಯನಾರಾಯಣರಾವ್ ಮತ್ತು ಇತರೆ ಕಾರ್ಮಿಕ ಮುಂದಾಳುಗಳನ್ನು ಗಡೀಪಾರು ನಡೆಸುವ ಸರಕಾರದ ನೀತಿಯ ವಿರುದ್ಧ 23-6-80 ರಂದು ತುಮಕೂರಲ್ಲಿ ನಡೆಯಲಿರುವ ಪ್ರತಿಭಟನಾ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲು ತೀರ್ಮಾನಿಸಲಾಯ್ತು.

●

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅಸಮಾನತೆ ಅನಿವಾರ್ಯವಾಗಿವೆ. ಪರಿಣಾಮವಾಗಿ ಒಕ್ಕೂಟದ ಪದ್ಧತಿಯು ಅಪಾಯದಲ್ಲಿದೆ ರಾಜ್ಯಗಳು ಕೇಂದ್ರದ ಸಾಲದ ಹೊರೆಯಿಂದ ಮುಕ್ತವಾಗಬೇಕಾದರೆ ಕೆಲವೊಂದು ತುರ್ತಿನ ಕ್ರಮಗಳನ್ನು ಕೈಕೊಳ್ಳಬೇಕು. 1. ರಾಜ್ಯಗಳ ಸಾಲ ಎತ್ತುವ ಮತ್ತು ತೆರಿಗೆ ವಿಧಿಸುವ ಅವಕಾಶಗಳನ್ನು ಹೆಚ್ಚಿಸಬೇಕು. 2. ಕೇಂದ್ರವು ರಾಜ್ಯಗಳ ಆರ್ಥಿಕ ಅಭಿವೃದ್ಧಿಗೆ ನೀಡುವ ನೆರವನ್ನು ಮಾತ್ರ 'ಸಾಲ' ಎಂದು ಪರಿಗಣಿಸಬೇಕು. ಆಡಳಿತ ವೆಚ್ಚ ಮತ್ತು ಪರಿಹಾರ ಕಾರ್ಯಕ್ರಮಗಳಿಗೆ ನೀಡುವ ನೆರವನ್ನು ಸಹಾಯಧನ (grant) ಎಂದು ಪರಿಗಣಿಸಬೇಕು. ಆರ್ಥಿಕ ಅಭಿವೃದ್ಧಿಗೆ ನೀಡುವ ಸಾಲಕ್ಕೂ ಕಡಿಮೆ ಬಡ್ಡಿ ಇರಬೇಕು. ಕೆಲವೊಂದು ಕ್ಷೇತ್ರಗಳಿಗೆ ನೀಡುವ ಸಾಲವು ಬಡ್ಡಿರಹಿತವಾಗಿರಬೇಕು. 3. ಕೇಂದ್ರವು ತೆರಿಗೆ, ಸಾಲ, ರಾಷ್ಟ್ರೀಯ ಉಳಿತಾಯ ಮುಂತಾದ ಎಲ್ಲಾ ಮಾಧ್ಯಮಗಳಿಂದ ಪಡೆಯುವ ಆದಾಯದ ಶೇ. 75ರಷ್ಟು ರಾಜ್ಯಗಳಿಗೆ ಒದಗಿಸಬೇಕು. ತನ್ನ ವೆಚ್ಚವನ್ನು ತನ್ನ ಆದಾಯದ ಶೇ. 25ಕ್ಕೆ ಮಿತಿಗೊಳಿಸಬೇಕು. ಅಂದರೆ, ಮಿಲಿಟರಿ ಹಾಗೂ ಆಡಳಿತವೆಚ್ಚ ಕಡಿಮೆ ಮಾಡಬೇಕು. ರಾಜ್ಯಸರಕಾರಗಳ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಕೃಷಿ, ಪೋಲೀಸು ಇತ್ಯಾದಿ ಇಲಾಖೆಗಳಿಗೆ ಕೇಂದ್ರವು ವೆಚ್ಚ ಮಾಡಬಾರದು. 4. ಕೇಂದ್ರವು ರಾಜ್ಯಗಳಿಗೆ ನೀಡುವ ಸಾಲ, ಸಹಾಯಧನ, ತೆರಿಗೆಗಳಲ್ಲಿ ಪಾಲು 'ಹಣಕಾಸು ಆಯೋಗ'ದ ಮೂಲಕವೇ ಬರುವಂತಾಗಬೇಕು. ಈ ಆಯೋಗವು ರಾಷ್ಟ್ರಾಧ್ಯಕ್ಷರಿಂದ ನೇಮಿಸಲ್ಪಡುವುದರಿಂದ ಸಂವಿಧಾನದಲ್ಲಿ ಇದಕ್ಕೆ ವರಿಷ್ಟನ್ಯಾಯಾಲಯದ ಸ್ಥಾನವಿರುವುದರಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ರಾಜಕೀಯ ಶಕ್ತಿಗಳ ನೇರ ಹಸ್ತಕ್ಷೇಪ ಇದರ ಕಾರ್ಯಕಲಾಪಗಳಲ್ಲಿ ಇರುವುದಿಲ್ಲ. ಸದ್ಯ ಕೇಂದ್ರವು ರಾಜ್ಯಗಳಿಗೆ ನೀಡುವ ನೆರವಿನ ಶೇ 40ರಷ್ಟೇ ಈ ಆಯೋಗದ ಸಲಹೆಗಳಂತೆ ಹಂಚಲಾಗುತ್ತಿದೆ, ಉಳಿದ ಶೇ. 60ರಷ್ಟು ಕೇಂದ್ರದಲ್ಲಿ ಅಧಿಕಾರದಲ್ಲಿರುವ ರಾಜಕೀಯ ಶಕ್ತಿಗಳ ಮರ್ಜಿಯಂತೆ ರಾಜ್ಯಗಳಿಗೆ ನೆರವು ನೀಡಲಾಗುತ್ತಿದೆ. ರಾಜ್ಯಗಳು ಕೇಂದ್ರದ ಕೃಪಾಕಟಾಕ್ಷದಲ್ಲಿರಬೇಕಾದ ಪರಿಸ್ಥಿತಿಹೋಗಿ, ನ್ಯಾಯಯುತವಾಗಿ ಅವುಗಳು ತಮ್ಮ ಆರ್ಥಿಕ ಅಭಿವೃದ್ಧಿಗೂ ಆಡಳಿತಕ್ಕೂ ಆದಾಯ ಪಡೆಯುವಂತಾಗಬೇಕು. 5, ಕೊನೆಯದಾಗಿ ಯೋಜನಾ ಆಯೋಗವು ಸಂವಿಧಾನದಲ್ಲಿ ಒಂದು ನಿರ್ದಿಷ್ಟ ಸ್ಥಾನ ಹೊಂದಿರಬೇಕು. ಎಲ್ಲಾ ರಾಜ್ಯಗಳ ಪ್ರತಿನಿಧಿಗಳಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ನಿರ್ದೇಶನದಂತೆ ರಾಷ್ಟ್ರೀಯ ಯೋಜನಾ ಆಯೋಗವು ಪುನಃ ರಚಿತವಾಗಬೇಕು. ರಾಷ್ಟ್ರದ ಹಾಗೂ ರಾಜ್ಯಗಳ ಯೋಜನೆಯು ಕೇಂದ್ರದಲ್ಲಿ ಅಧಿಕಾರದಲ್ಲಿರುವ ರಾಜಕೀಯ ಪಕ್ಷದ ಏಕಸ್ವಾಮ್ಯವಾಗಿರಬಾರದು. ಕೇಂದ್ರ-ರಾಜ್ಯಗಳ ಸಂಬಂಧದಲ್ಲಿ ಇಂತಹ ಬದಲಾವಣೆಗಾಗಿ ಪ್ರಜಾಪ್ರಭುತ್ವವಾದಿ ಆಂದೋಳನ ಬೆಳೆಯಬೇಕು.

●

ಸಿ. ಐ. ಟಿ. ಯು. ದಶಮಾನೋತ್ಸವ

ಕುಂದಾಪುರ :

30-5-1980ರಂದು ಸಿ.ಐ.ಟಿ.ಯು.ವಿನ ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ಕುಂದಾಪುರದಲ್ಲಿ ಕಾರ್ಮಿಕ ಸಂಘಗಳ ಮೆರವಣಿಗೆ ಮತ್ತು ಸಭೆ ನಡೆಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕುಂದಾಪುರ ತಾಲ್ಲೂಕು ಹೆಂಚಿನ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ. ಸಿ. ನಾರಾಯಣ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಕೆ ಶಂಕರ ಅವರು ಸ್ವಾಗತಿಸಿ, ಸಿ.ಐ.ಟಿ.ಯು. ಸ್ಥಾಪನೆಯ ಮಹತ್ವ ಮತ್ತು ಹತ್ತು ವರ್ಷಗಳ ಸಾಧನೆಯನ್ನು ಕುರಿತು ಮಾತನಾಡಿದರು.

ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಉಪಾಧ್ಯಕ್ಷರಾದ ಕಾ. ಪಿ. ರಾಮಚಂದ್ರರಾವ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾಂ. ಸೂರ್ಯನಾರಾಯಣರಾವ್ ಮತ್ತಿತರ ಮುಖಂಡರ ಗಡೀಪಾರು ಕ್ರಮವನ್ನು ಉಗ್ರವಾಗಿ ಖಂಡಿಸಿ, ಅಗತ್ಯ ಸೇವಾ ಮಸೂದೆಯನ್ನು ವಿರೋಧಿಸಲು ಕಾರ್ಮಿಕರಿಗೆ ಕರೆನೀಡಿದರು.

ನಂತರ ಹೆಂಚಿನ ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡ ಅವರು ಮಾತನಾಡಿ, ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿರೋಧಿ ಮತಗಳನ್ನು ಪಡೆದು ಆಯ್ಕೆಯಾಗಿ ಇತ್ತೀಚೆಗೆ ಕಾಂಗ್ರೆಸ್ ಸೇರಿದ ಕಾಪು ಸಂಜೀವಶೆಟ್ಟರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಚಿಕ್ಕಬಳ್ಳಾಪುರ :

ಸಿ.ಐ.ಟಿ.ಯು. ಹತ್ತನೇ ವಾರ್ಷಿಕೋತ್ಸವವನ್ನು ಚಿಕ್ಕಬಳ್ಳಾಪುರದ ಕೃಷಿ ಕಾರ್ಮಿಕರು ಮತ್ತು ರೇಷ್ಮೆ ಕೆಲಸಗಾರರು ಆಚರಿಸಿದರು. ಕಾಂ. ಎಸ್. ಲಕ್ಷ್ಮಯ್ಯನವರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಕಾಂ. ಕಾಂತರಾಜ್, ಕಾಂ. ಎಚ್. ಎಸ್. ಸತ್ಯನಾರಾಯಣರಾವ್, ಕಾಂ. ಬಿ. ಮುದ್ದಪ್ಪ ಇವರು ಮೆರವಣಿಗೆಯಲ್ಲಿ ಬಂದು ಗಡೀಪಾರು ಕ್ರಮ, ಅಗತ್ಯ ಸೇವಾ ಮಸೂದೆಗಳ ವಿರುದ್ಧ ಘೋಷಣೆ ಕೂಗಿ, ಅವುಗಳ ರದ್ದಿಗಾಗಿ ಒತ್ತಾಯಿಸಿದರು. ಈ ಬಗ್ಗೆ ಅಲ್ಲಿನ ಅಸಿಸ್ಟೆಂಟ್ ಕಮೀಷನರ್‌ಗೆ ಮನವಿ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಭಾಗವಹಿಸಿದ್ದರು. ನಂತರ ಬಹಿರಂಗ ಸಭೆ ನಡೆಯಿತು.

○

ಮುಖ್ಯಮಂತ್ರಿಯವರನ್ನು ಭೇಟಿಯಾಗಲು ಸೇರಿದ್ದ ಕಾರ್ಮಿಕರ ಮೇಲೆ ಲಾಠಿ ಚಾರ್ಜು

ಇದೇ ತಾರೀಖು 1-6-80ರಂದು ಬೆಳಗಾವಿಗೆ ಮುಖ್ಯಮಂತ್ರಿಯವರು ಬರುವ ಸುದ್ದಿ ತಿಳಿದು ಹೋರಾಟದ ಪಥದಲ್ಲಿರುವ ಇಂಡಾಲ್ ಕಾರ್ಮಿಕರು, ಪವರ್‌ಲೂಮ್ ಕಾರ್ಮಿಕರು ಮತ್ತು ಹೋಮಿಯೋಪಥಿಕ್ ವಿದ್ಯಾರ್ಥಿಗಳು ಅವರನ್ನು ಭೇಟಿಯಾಗಿ ಮನವಿ ಅರ್ಪಿಸಲು ಸರ್ಕಿಟ್ ಹೌಸಿನ ಬಳಿ ಬೆಳಿಗ್ಗೆ 9 ಗಂಟೆಯಿಂದಲೇ ಕಾದಿದ್ದರು. 10-30ಗಂಟೆಗೆ ಬರಬೇಕಾಗಿದ್ದ ಮುಖ್ಯಮಂತ್ರಿಯವರು ಮಧ್ಯಾಹ್ನದ ಮೇಲೆ 3 ಗಂಟೆಗೆ ಬಂದರು. ಬಂದೊಡನೆ ನೇರವಾಗಿ ಡಿ.ಸಿ.ಸಿ. ಬ್ಯಾಂಕಿನ ಬಳಿ ಹೋದರು. ಆಗ ಪವರ್‌ಲೂಮ್ ಕಾರ್ಮಿಕರು ಘೋಷಣೆ ಕೂಗುತ್ತಾ ಡಿ. ಸಿ. ಸಿ. ಬ್ಯಾಂಕಿನ ಬಳಿ ಹೋದರು. ಆಗ ಈ ಕಾರ್ಮಿಕರ ಮೇಲೆ ಪೋಲೀಸರು ಲಾಠಿಚಾರ್ಜು ನಡೆಸಿದರು.

ಮುಖ್ಯಮಂತ್ರಿಯವರು ಸರ್ಕಿಟ್ ಹೌಸಿನ ಸಮೀಪ ಬಂದೊಡನೆಯೆ ಎಲ್ಲಾ ಸಂಘಟನೆಗಳ ಮುಂದಾಳುಗಳೂ ಸೇರಿ ಒಂದು ಮನವಿಯನ್ನು ಅರ್ಪಿಸಿದರು. ಆದರೆ ಕಾರ್ಮಿಕರ ಮುಂದಾಳುಗಳು ಹೇಳುವ ಒಂದು ಮಾತನ್ನೂ ಕೇಳಲು ಮುಖ್ಯಮಂತ್ರಿಗೆ ಪುರುಸೊತ್ತಾಗಲಿಲ್ಲ. ಆ ಮೇಲೆ 4-30 ಗಂಟೆಗೆ ಮುಖ್ಯಮಂತ್ರಿಯವರು ಸರ್ಕಿಟ್ ಹೌಸಿನಿಂದ ಹೊರಟು ಹೋದೊಡನೆಯೇ ಪೋಲೀಸರು ನೆರೆದಿದ್ದ ಕಾರ್ಮಿಕರ ಮೇಲೆ ಅಮಾನುಷವಾಗಿ ಲಾಠಿ ಚಾರ್ಜು ನಡೆಸಿದರು. ಕಾರ್ಮಿಕರೆಲ್ಲಾ ಚದರಿಹೋದ ಮೇಲೂ, ಸುತ್ತ ಮುತ್ತ ಒಂದು ಕಿಲೋಮೀಟರು ದೂರದಲ್ಲೆಲ್ಲಾ ಹುಡುಕಾಡಿ ಹೊಡೆಯಲಾಯಿತು. ಆಮೇಲೆ 15ಮಂದಿ ಇಂಡಾಲ್ ಕಾರ್ಮಿಕರು, 3ಮಂದಿ ಪವರ್‌ಲೂಮ್ ಕಾರ್ಮಿಕರು ಮತ್ತು ಒಬ್ಬ ದಾರಿಹೋಕನನ್ನೂ ಬಂಧಿಸಲಾಯ್ತು. ಬಂಧಿತರಾದವರನ್ನು ರಾತ್ರಿ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ತಾ. 2-6-80ರಂದು ನಗರದ ತಿಲಕ್‌ಚೌಕದಲ್ಲಿ ನಾಗರೀಕ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಸಭೆ ಜರುಗಿತು. ಪ್ರತಿಭಟನಾ ಸಭೆಯಲ್ಲಿ ಕಾಂ. ಪದ್ಮಣ್ಣವರ್, ಕಾಂ. ಎಸ್. ಎಮ್. ಯಾತ್ನಾ, ಕಾಂ. ವಿಜಯಕುಮಾರ್, ಕಾಂ. ಕೃಷ್ಣಮೇಣ್ಸೆ, ಶ್ರೀ ರಾಮುಲಪ್ಪ, ಮತ್ತು ಶ್ರೀ ಬಿ. ಬಿ. ಶಯನರ್ ಮಾತನಾಡಿ ಲಾಠಿಚಾರ್ಜು ನಡೆಸಿದ್ದನ್ನು ತೀವ್ರವಾಗಿ ಖಂಡಿಸಿದರು.

●

ಹಕ್ಕುಗಳ ರಕ್ಷಣೆಗಾಗಿ ಬೆಂಗಳೂರಲ್ಲಿ ಕಾರ್ಮಿಕರ ಬೃಹತ್ ರ್ಯಾಲಿ

(ಒಂದನೇ ಪುಟದಿಂದ)

ಕಾಂ. ಎಂ. ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಕಾರ್ಮಿಕರ ಹಕ್ಕುಗಳ ಮೇಲೆ ನಡೆಯುತ್ತಿರುವ ಆಕ್ರಮಣವನ್ನು ಎದುರಿಸಲು ರಾಷ್ಟ್ರಮಟ್ಟದಲ್ಲಿ ಕಾರ್ಮಿಕರು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಕಾರ್ಮಿಕರ ಹಕ್ಕುಗಳನ್ನು ಕಬಳಿಸಲು ಪ್ರಯತ್ನಿಸುವ ಎಲ್ಲರ ವಿರುದ್ಧ ಹೋರಾಡಬೇಕೆಂದು ಹೇಳಿದರು. ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡುವ ಸರ್ಕಾರದ ಕ್ರಮವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕ್ರಮದ ಅನುಕರಣೆಯೆಂದು ವಿವರಿಸಿ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು, ತಮ್ಮ ಹಾಸ್ಯಮಯ ಭಾಷಣದಿಂದ ಕಾರ್ಮಿಕರನ್ನು ರಂಜಿಸಿದ ವೆಂಕಟೇಶ್‌ರವರು ವಿಧಾನಸಭೆಯಲ್ಲಿ ತಂದಿರುವ ಈ ಮಸೂದೆಯು ಶಾಸನವಾಗುವುದಿಲ್ಲ ಬದಲಿಗೆ ಗುಂಡೂರಾಯರ ನಾಶನವಾಗುವುದೆಂದು ಹೇಳಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್‌ರವರು ಕಾರ್ಮಿಕರು ತಮ್ಮ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರಮಟ್ಟದಲ್ಲಿ ಐಕ್ಯ ಹೋರಾಟ ನಡೆಸಬೇಕೆಂದು ಈ ದಿಕ್ಕಿನಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಪ. ಬಂಗಾಳ, ತ್ರಿಪುರಾ ಮತ್ತು ಕೇರಳದ ಜನತೆಯ ಸಾಧನೆಯನ್ನು ವಿವರಿಸಿದರು.

ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮಾತನಾಡಲು ಏಳುತ್ತಿದ್ದಂತೆ ಕಾರ್ಮಿಕರು ಉತ್ಸಾಹದಿಂದ ಕರತಾಡನ, ಸೀಟಿಗಳ ಮೂಲಕ ತಮ್ಮ ಮೆಚ್ಚುಗೆ ಸೂಚಿಸಿದರು. ಕಾರ್ಮಿಕರು ಬಂಡವಾಳಗಾರ ಏಜೆಂಟರಾದ ಗುಂಡೂರಾವ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಲು ದಿಟ್ಟ ಹೋರಾಟ ನಡೆಸಬೇಕೆಂದರು. ಕಾರ್ಮಿಕರ ಓಟು ತೆಗೆದುಕೊಂಡು ಕಾರ್ಮಿಕರ ಹಿತರಕ್ಷಣೆಗೆ ಹೋರಾಡುತ್ತಿರುವ ಮುಖಂಡರನ್ನು ಗಡೀಪಾರು ಮಾಡುವ ಈ ಸರ್ಕಾರವನ್ನೇ ಗಡೀಪಾರು ಮಾಡಬೇಕೆಂದರು. ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಮಾತ್ರವಲ್ಲದೆ ರಾಜಕೀಯ ಅಧಿಕಾರವನ್ನು ಹಿಡಿಯಲು ಕಾರ್ಮಿಕವರ್ಗದ ರಾಜಕೀಯವನ್ನು ಅರಿಯಬೇಕೆಂದು ಹೇಳಿದರು. ಕರ್ನಾಟಕದಲ್ಲಿ ಕಾರ್ಮಿಕರ ಹಕ್ಕುಗಳನ್ನು ಮರ್ದನ ಮಾಡುತ್ತಿದ್ದರೆ ಪ. ಬಂಗಾಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೂ ಟ್ರೇಡ್‌ಯೂನಿಯನ್ ಹಕ್ಕುಗಳನ್ನು ನೀಡಿರುವುದನ್ನು ಎತ್ತಿ ಹೇಳಿದರು. 'ಅಗತ್ಯ ಸೇವಾ ಮಸೂದೆ', 'ಗಡೀಪಾರು ಆಜ್ಞೆ'ಗಳನ್ನು ಸರ್ಕಾರವು ಹಿಂತೆಗೆದುಕೊಳ್ಳುವಂತಾಗಬೇಕಾದರೆ ಕಾರ್ಮಿಕರು ರಾಜ್ಯಮಟ್ಟದಲ್ಲಿ ಐಕ್ಯ ಹೋರಾಟ ನಡೆಸಬೇಕೆಂದೂ ಜನರಲ್ ಸ್ಟ್ರೈಕ್‌ಗೂ ತಯಾರಿರಬೇಕೆಂದು ಕರೆ ನೀಡಿದರು. ಕೊನೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್‌ರವರು 'ಕಾರ್ಮಿಕ ಮುಖಂಡರ ಒತ್ತಾಯದ ಮೇರೆಗೆ ನಾನು ಹಿಂತೆಗೆದುಕೊಂಡಿದ್ದ ಈ ಮಸೂದೆಯನ್ನು ನನ್ನ ಹೆಸರಿನಲ್ಲೇ ಪುನಃ ತಂದು ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರೆಸಿದ ಚಾಣಾಕ್ಷತನ'ವನ್ನು ತೋರುತ್ತಿರುವ ಗುಂಡೂರಾಯರು ನನ್ನ ಗರಡಿಯಲ್ಲಿ ಬೆಳೆದು ನನಗೇ ತಿರುಮಂತ್ರ ಹಾಕುತ್ತಿದ್ದಾರೆ? ಎಂದು ಹೇಳಿದಾಗ ಸಭೆಯು ನಗೆಗಡಲಿನಲ್ಲಿ ಮುಳುಗಿತು. ಗುಂಡೂರಾಯರು ಅಧಿಕಾರಕ್ಕೆ ಬಂದ ತಕ್ಷಣ ಸರ್ಕಾರಿ ಅಧಿಕಾರಿಗಳಿಗೆ 'ಮಜ ಮಾಡಿರಿ' ಎಂದು ಕರೆ ನೀಡಿದ್ದು ತಾವೂ ಸ್ವಲ್ಪಕಾಲ ಮಜ ಮಾಡಲಿ ಬಿಡಿ ಎಂದು ಅರಸುರವರು ಹೇಳಿದರು. ಈ ಕಾರ್ಯಕ್ರಮದ ಮೂಲಕ ಕಾರ್ಮಿಕರ ಶಕ್ತಿಯನ್ನು ಅರಿತು ಮಸೂದೆಯನ್ನು, ಗಡೀಪಾರು ಕ್ರಮವನ್ನು ಹಿಂತೆಗೆದುಕೊಂಡರೂ ಸಂತೋಷ, ವಾಪಸ್ ತೆಗೆದುಕೊಳ್ಳದಿದ್ದರೂ ಸಂತೋಷ ಎಂದ ಅರಸರು ಇದರಿಂದಾಗಿ ನಾವು ಇನ್ನೂ ಉತ್ತಮ ರೀತಿಯಲ್ಲಿ ರಾಜ್ಯಮಟ್ಟದಲ್ಲಿ ಜನತೆಯ ಐಕ್ಯ ಚಳುವಳಿಯನ್ನು ಬಲಿಷ್ಟಪಡಿಸಲು ಅವಕಾಶ ದೊರೆಯುವುದೆಂದು ಹೇಳಿದರು. ಈ ಜನವಿರೋಧಿ ಕ್ರಮವನ್ನು ಗುಂಡೂರಾಯರು ಹಿಂತೆಗೆದುಕೊಳ್ಳದಿದ್ದಲ್ಲಿ ಏನುಮಾಡಬೇಕೆಂಬುದು ನಮಗೆಲ್ಲಾ ತಿಳಿದಿದೆಯೆಂದು ಅರಸರು ನುಡಿದಾಗ ಕಾರ್ಮಿಕರು ಏನುಮಾಡುವಿರಿ? ಎಂದು ಪ್ರಶ್ನೆಗಳನ್ನು ಹಾಕಿದಾಗ 'ಎಲ್ಲಾ ಪಟ್ಟುಗಳನ್ನು ಇಲ್ಲೇ ತೋರಿಸಿದರೆ ಕುಸ್ತಿಯನ್ನು ಗೆಲ್ಲುವುದು ಹೇಗೆ?' ಎಂದಾಗ ಕಾರ್ಮಿಕರು ಮತ್ತೊಮ್ಮೆ ನಗೆಗಡಲಿನಲ್ಲಿ ಮುಳುಗಿದರು. ಕೇಂದ್ರದಲ್ಲಿ ಸರ್ವಾಧಿಕಾರಿಣಿ ಇಂದಿರಾಗಾಂಧಿ ಮತ್ತವಳ ದುಷ್ಟಕೂಟವು ಏನಕೇನ ಪ್ರಕಾರೇಣ ಪುನಃ ಅಧಿಕಾರಕ್ಕೆ ಬಂದಿರುವುದರಿಂದ ಕಾರ್ಮಿಕರ ಟ್ರೇಡ್‌ಯೂನಿಯನ್ ಹಕ್ಕುಗಳಿಗೆ ಮಾತ್ರವಲ್ಲದೆ ಇಡೀ ಜನತೆಯ ಸ್ವಾತಂತ್ರ್ಯಕ್ಕೆ ಬಾರಿ ಧಕ್ಕೆ ಬಂದಿದೆಯೆಂದು ಹೇಳಿದ ಅರಸರು ಈ ಧಾಳಿಯನ್ನು ಎದುರಿಸಲು ಕಾರ್ಮಿಕವರ್ಗ ಮತ್ತು ಜನತೆ ರಾಷ್ಟ್ರಮಟ್ಟದಲ್ಲಿ ಬಲಿಷ್ಟ ಮತ್ತು ಐಕ್ಯಹೋರಾಟವನ್ನು ನಡೆಸಬೇಕೆಂದು ಕರೆ ನೀಡಿದರು. ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಈಗಾಗಲೇ ಈ ಮಸೂದೆಯನ್ನು ಜಾರಿಗೆ ತಂದಿರುವ ಇಂದಿರಾ ಕಾಂಗ್ರೆಸ್ 'ಸ್ಥಾನಬದ್ಧತಾ ಕಾಯಿದೆ'ಯನ್ನು ತನ್ನ ಹಿಡಿತದಲ್ಲಿರುವ ಎಲ್ಲ ರಾಜ್ಯಗಳಲ್ಲೂ ಕಾರ್ಯಾಚರಣೆಯ ಹಂತಕ್ಕೆ ತಂದಿದ್ದು ಈ ಸರ್ವಾಧಿಕಾರಿ ಕ್ರಮಗಳ ವಿರುದ್ಧ ದೇಶದಲ್ಲಿ ಇನ್ನೂ ವ್ಯಾಪಕ ಚಳುವಳಿ ಪ್ರಾರಂಭವಾಗದಿರುವುದಕ್ಕೆ ತಮ್ಮ ಅಸಹನೆ ವ್ಯಕ್ತಪಡಿಸಿದ ದೇವರಾಜ ಅರಸ್‌ರವರು ಈ ದಿಕ್ಕಿನಲ್ಲಿ ತಕ್ಷಣ ಕಾರ್ಯಾರಂಭ ಮಾಡಬೇಕೆಂದು ಹೇಳಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

●

ಸಂಪಾದಕೀಯ

(ಒಂದನೇ ಪುಟದಿಂದ)

ಟಕ ಸರಕಾರ ಮುಂಬಡ್ತಿಯಲ್ಲಿ ಮೀಸಲಾತಿ ಜಾರಿಗೆ ತರುವುದನ್ನು ತಾತ್ಕಾಲಿಕವಾಗಿ ಹಿಂತೆಗೆದಿದೆ, ಇದರಿಂದ ಸರಕಾರದ ಕ್ರಮದ ಬಗ್ಗೆ ತೀವ್ರ ಪ್ರತಿಭಟನೆ ಬಂದಿದೆ.

ಈ ಪ್ರಶ್ನೆ ಈಗ ರಾಜ್ಯದ ಶಾಸನಸಭೆಯಲ್ಲಿ ಚರ್ಚಿಸಲ್ಪಡುತ್ತಿದೆ. ಇದರ ಬಗ್ಗೆ ಸರ್ಕಾರ ಯಾವ ತೀರ್ಮಾನ ತೆಗೆದುಕೊಳ್ಳಲಿದೆಂದು ನೋಡಬೇಕಾಗಿದೆ.

ಮೀಸಲಾತಿಯಿಂದ ಹರಿಜನ-ಗಿರಿಜನರ ಶೋಷಣೆ ಕೊನೆಗೊಳ್ಳುತ್ತದೆಂಬ ಭ್ರಮೆ ನಮಗಿಲ್ಲದಿದ್ದರೂ ಈಗಿನ ಪರಿಸ್ಥಿತಿಯಲ್ಲಿ ಇದು ಅಗತ್ಯವೆಂದು ನಮ್ಮ ಅಭಿಪ್ರಾಯ, ಮೇಲಿನ ಹುದ್ದೆಗಳಲ್ಲೂ ಇದನ್ನು ಜಾರಿಗೊಳಿಸಬೇಕು. ಆದರೆ ಆ ಸಂದರ್ಭದಲ್ಲಿ ಇತರ ವಿಭಾಗದ ನೌಕರರಿಗೆ ಅನ್ಯಾಯವಾಗದಂತೆ ನೋಡುವುದೂ ಅಗತ್ಯವಿದೆ. ಯಾಕೆಂದರೆ ಇಲ್ಲದಿದ್ದರೆ ಉದ್ಯೋಗಸ್ಥರಲ್ಲೇ ಪರಸ್ಪರ ತಿಕ್ಕಾಟ ಬಂದು, ಆಡಳಿತೆಯಲ್ಲಿ ದಕ್ಷತೆಗೆ ಧಕ್ಕೆ ಬರಬಹುದು. ಆದ್ದರಿಂದ ಹರಿಜನ-ಗಿರಿಜನರಿಗೆ ಮುಂಬಡ್ತಿ ಕೊಡುವಾಗ ವಿವಿಧ ಹುದ್ದೆಗಳ ಸಂಖ್ಯೆಯನ್ನೂ ಸಹ ಹೆಚ್ಚಿಸಿ ಮುಂಬಡ್ತಿ ಸಿಗಬೇಕಾದ ಇತರರಿಗೂ ಅದನ್ನು ಕೊಡಬೇಕು. ಆಗ ಯಾರಿಗೂ ಮನಸ್ತಾಪ ಬರಲು ಸಾಧ್ಯವಾಗುವುದಿಲ್ಲ. ಯಾರಿಗೂ ಅನ್ಯಾಯವಾಗುವುದಿಲ್ಲ.

ಮೀಸಲಾತಿಯನ್ನು ಜಾರಿಗೆತಂದರೂ ಈ ದಲಿತ ವಿಭಾಗದ ಸಮಸ್ಯೆ ಪರಿಹಾರವಾಗಲು ಸಾಧ್ಯವಿಲ್ಲ. ಈಗಿನ ಸಮಾಜ ವ್ಯವಸ್ಥೆಯಲ್ಲಿ ನಿರುದ್ಯೋಗ ತಾಂಡವವಾಡುತ್ತಿರುವಾಗ ಈ ಸಮಸ್ಯೆ ಪರಿಹಾರವಾಗಲು ಸಾಧ್ಯವೇ? ಅದಕ್ಕೆ ಎಲ್ಲರೂ ಒಂದುಗೂಡಿ ಸಮಾಜವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ತರಲು- ಅಂದರೆ, ಸಮಾಜವಾದಿಕ್ರಾಂತಿ ಅಗತ್ಯ. ನಮ್ಮ ಗಮನ ಅತ್ತ ಹರಿಯಲೆಂದು ನಮ್ಮ ಹಾರೈಕೆ. ○

....ಗಡೀಪಾರು ಕ್ರಮದ ಖಂಡನೆ

(ಒಂದನೇ ಪುಟದಿಂದ)

ಮುಂದಿಟ್ಟಿಲ್ಲವೆಂದು ಶ್ರೀ ಡಿ. ರಾಜಗೋಪಾಲ್ ಹೇಳಿದರು. ಎಂ.ಇ.ಎ. (ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್) ಮೇಲೆ ಕ್ರಮತೆಗೆದುಕೊಳ್ಳುವಾಗ ಮೈಕೊದಲ್ಲಿರುವ ಇನ್ನೊಂದು ಗುಂಪಿನ ಬಗೆಗಾಗಲೀ, ಈ ಗುಂಪನ್ನು ಯಾರು ಬೆಂಬಲಿಸುತ್ತಲಿರುವರೆಂಬುದನ್ನಾಗಲೀ ತಿಳಿದುಕೊಳ್ಳಲು ಸರಕಾರ ಮುಂದೆ ಬಂದಿಲ್ಲ. ಗಡೀಪಾರು ಮಾಡುವ ಸೆಕ್ಷನ್ 55 ಕ್ರಮವು ಇಂಗ್ಲೀಷರ ಕಾಲದಲ್ಲಿದ್ದ ಬೊಂಬಾಯಿ ಪೋಲೀಸ್ ಕಾಯ್ದೆಯಂತಿದೆ ಎಂದ ರಾಜಗೋಪಾಲ್ ಅವರು "ಸ್ವಾತಂತ್ರ್ಯವನ್ನು ಮೊಟಕುಗೊಳಿಸಬೇಡಿರಿ" ಎಂದು ಸರಕಾರವನ್ನು ಒತ್ತಾಯಿಸಿದರು. ಗೂಂಡಾಗಳ ಮೇಲೆ ಜಾರಿ ಮಾಡುವುದಕ್ಕಾಗಿ ಇರುವಂತಹ ಸೆಕ್ಷನ್ 55 ಕಾಯ್ದೆಯನ್ನು ಕಾರ್ಮಿಕ ಸಂಘಟನೆಯ ಚಟುವಟಿಕೆಗಳನ್ನು ಪ್ರತಿಬಂಧಿಸಲು ಉಪಯೋಗಿಸುವುದರ ಔಚಿತ್ಯವನ್ನೆ ಪ್ರಶ್ನಿಸಿದರು. ಯಥಾರ್ಥವನ್ನು ಕಂಡುಹಿಡಿಯಲು ಒತ್ತಾಯಿಸಿದ ರಾಜಗೋಪಾಲ್ ಅವರು ಕಾನೂನು ರೀತ್ಯಾ ಸಂಘಟಿತವಾದ ಎಮ್.ಇ.ಎ.ಯ ವಿರುದ್ಧ ಇರುವ ಗುಂಪನ್ನು ಯಾರು ಬೆಂಬಲಿಸುತ್ತಲಿರುವರೆಂದು ತಿಳಿದು, ಹಿಂಸಾತ್ಮಕ ಘಟನೆಗಳಲ್ಲಿ ಇವರ ಪಾತ್ರ ಏನೆಂದು ತಿಳಿದು ಮುಂದುವರೆಯುವಂತೆ ಸರಕಾರವನ್ನು ಒತ್ತಾಯಿಸಿದರು.

ಸದಸ್ಯರ ಅಭಿಪ್ರಾಯವನ್ನು ಸರಕಾರಕ್ಕೆ ಮುಟ್ಟಿಸುವಂತೆ ಪರಿಷತ್ತಿನ ಮುಂದಾಳು ಶ್ರೀ ಬಂಗಾರಪ್ಪ ಅವರಿಗೆ ವಿಧಾನ ಪರಿಷತ್ತಿನ ಅಧ್ಯಕ್ಷರು ಹೇಳಿದರು.

○

ದಲಿತರಮೇಲೆ ಪೋಲೀಸರ ಅಮಾನುಷ ಹಲ್ಲೆ

ಮಾರ್ಕ್ಸಿಸ್ಟ್ ಪಕ್ಷದಿಂದ ಖಂಡನೆ

ಕೋಲಾರ ಜಿಲ್ಲಾ ಹುಣಿಸೆಕೋಟೆ ಶೇಷಗಿರಿಯಪ್ಪನ ಹತ್ಯೆ ನಡೆಸಿದವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಲು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ಸಂಘಟಿಸಿದ ಹುಣಿಸೆಕೋಟೆಯಿಂದ 9-6-1980 ರಂದು ಹೊರಟ ಕಾಲ್ನಡೆ ಜಾಥಾವು 12ರಂದು ಮಧ್ಯಾಹ್ನದ ಮೇಲೆ 2 ಘಂಟೆಗೆ ಬೆಂಗಳೂರು ನಗರದ ವಿಧಾನ ಸೌಧದ ಬಳಿ ಇರುವ ಕಬ್ಬನ್ ಪಾರ್ಕನ್ನು ಸೇರಿತು. ದಿವಂಗತ ಶೇಷಗಿರಿಯಪ್ಪನ ಮಗಳು, ಭೂಮಾಲಕ ಕೃಷ್ಣೇಗೌಡನ ಅತ್ಯಾಚಾರಕ್ಕೆ ಬಲಿಯಾಗಿದ್ದ ಅನುಸೂಯಮ್ಮನ ನೇತೃತ್ವದ ಈ ಜಾಥಾದಲ್ಲಿ ಸುಮಾರು 300ಕ್ಕಿಂತಲೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಸಂಜೆ ಆರು ಘಂಟೆಯ ತನಕ ತಾಳ್ಮೆಯಿಂದ ಯಾರಾದರೂ ಅಧಿಕಾರಿಗಳು ಬಂದು ಮನವಿಯನ್ನು ಸ್ವೀಕರಿಸುವರೆಂದು ಜಾಥಾದಲ್ಲಿ ಬಂದವರೆಲ್ಲ ಕಾಯುತ್ತಿದ್ದರು. ಆರು ಘಂಟೆಯಾದರೂ ಯಾರೂ ಬಾರದಿರುವಾಗ "ಕೊಲೆಗಡುಕರನ್ನು ಬಂಧಿಸಿ ಇಲ್ಲವೇ ನಮ್ಮನ್ನು ಬಂಧಿಸಿ" ಎಂದು ಕೂಗುತ್ತಾ ನೆರೆದ ಮಂದಿ ಶಾಂತಯುತವಾಗಿ ಮುಂದೆ ಹೋಗುವಾಗ ಪೋಲೀಸರು ಅಮಾನುಷ ಹಲ್ಲೆ ನಡೆಸಿದರು. ಅನುಸೂಯಮ್ಮನ ಮೇಲೆ ಧಾಳಿಮಾಡಿ ನೆಲದಲ್ಲಿ ಹೊರಳಾಡುವಂತೆ ಮಾಡಿದರು. ಲಾಠಿ ಚಾರ್ಜಿನ ಹೊಡೆತಕ್ಕೆ ನೂರಾರು ದಲಿತ ಕಾರ್ಯಕರ್ತರು ಸಿಕ್ಕಿಕೊಂಡರು. ಪತ್ರಕರ್ತರಾದ ಇಂದೂಧರ ಹೊನ್ನಾಪುರ ಮತ್ತು ಶಿವಾಜಿ ಗಣೇಶನ್‌ರವರ ಮೇಲೂ ಲಾಠಿ ಪೆಟ್ಟುಗಳು ಬಿದ್ದವು. ಇಷ್ಟರಿಂದಲೇ ತೃಪ್ತರಾಗದ ಪೋಲೀಸರು ಸುಮಾರು 150 ಮಂದಿಯನ್ನು ಬಂಧಿಸಿರುವರು.

ನ್ಯಾಯ ಕೇಳಲು ಬಂದ ದಲಿತರಿಗೆ ನ್ಯಾಯ ಒದಗಿಸಿಕೊಡುವ ಬದಲು ಈ ರೀತಿ ಅಮಾನುಷ ಧಾಳಿ ನಡೆಸಿದ್ದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಸರಕಾರದ ಈ ಹೇಯ ಕೃತ್ಯವನ್ನು ಪ್ರತಿಭಟಿಸಲು ರಾಜ್ಯದ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮುಂದಾಗಲು ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕರೆ ಇತ್ತಿರುವರು.

○

ಯುವಜನ ಸಂಘಟನಾ ಸಭೆಗಳು

ಬೆಂಗಳೂರು ನಗರದ ಆಸ್ಟಿನ್ ನಗರದಲ್ಲಿ 21-4-80 ರಂದೂ, ವಸಂತನಗರದಲ್ಲಿ 5-6-80 ರಂದೂ ಯುವಜನರ ಸಭೆನಡೆದು ಪ್ರಜಾಸತ್ತಾತ್ಮಕ ಯುವಜನ ಸಂಘಟನಾ ಶಾಖೆಗಳನ್ನು ಪ್ರಾರಂಭಿಸಲಾಯ್ತು. ಕಾಂ. ವಿನ್ಸೆಂಟ್ ಅವರನ್ನು ಆಸ್ಟಿನ್ ಟೌನ್ ಸಮಿತಿಯ ಸಂಚಾಲಕರನ್ನಾಗಿಯೂ, ಕಾಂ. ಕುಮಾರ್ ಅವರನ್ನು ವಸಂತನಗರ ಸಮಿತಿಯ ಸಂಚಾಲಕರನ್ನಾಗಿಯೂ ನೇಮಿಸಲಾಗಿದೆ. ಬೆಂಗಳೂರು ಜಿಲ್ಲಾ ಸಂಚಾಲಕ ಕಾಂ. ವೆಂಕಟನಾಗನ್ ಮತ್ತು ರಾಜ್ಯ ಸಂಚಾಲಕ ಜಿ. ವಿ. ಶ್ರೀರಾಮರೆಡ್ಡಿ ಈ ಸಭೆಗಳಲ್ಲಿ ಭಾಗವಹಿಸಿದ್ದರು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT